ಯಕ್ಷಗಾನ ಪ್ರಸಂಗ

ಅಂಬಿಕಾ ಮಹಾತ್ಮ್ಯೆ

ಕವಿ

ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಜನವರಿ ೧೪, ೨೦೨೧

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

ಗೌರವಾನ್ವಿತ ಸಂಪಾದಕ ಮಂಡಳಿ:

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

ಗೌರವಾನ್ವಿತ ಸಲಹಾ ಮಂಡಳಿ:

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

ಕಾರ್ಯಕಾರಿ ಮಂಡಳಿ:

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

ಗೌರವಾನ್ವಿತ ಸ್ವಯಂಸೇವಕರು:

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರು ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

ಸಹಕಾರ:

ಪ್ರಸಂಗ ಕವಿಗಳು:

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

ಕವಿಚರಿತ್ರೆ ಮತ್ತು ಪ್ರಸಂಗಯಾದಿ:

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

ಸಂಸ್ಥೆಗಳು:

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

ಯಕ್ಷವಾಹಿನಿ ಸಂಸ್ಥೆ

ಗೌರವಾನ್ವಿತ ಸಲಹಾ ಮಂಡಳಿ:

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

ಆರ್ಥಿಕ ಸಹಾಯ:

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಪುಸ್ತಕ ಸಹಾಯ:

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.

ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು

ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು

ರವಿ ಮಡೋಡಿ
ಯೋಜನಾಧ್ಯಕ್ಷರು

ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

ಸಾರಾಂಶ

ಪ್ರಸಂಗ ವಿಧ:
ಪೌರಾಣಿಕ

ಆಧಾರ ಗ್ರಂಥ:
ಶಿವಪುರಾಣ

ಭಾಷೆ:
ಕನ್ನಡ

ಹಿಂದಿನ ಪ್ರಕಾಶನಗಳ ವಿವರ:
ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ – ೧೯೮೭

ಹಕ್ಕುಸ್ವಾಮ್ಯ ವಿವರ:
ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

ಒಟ್ಟು ಪದ್ಯಗಳು:
೨೮೨

ಪಾತ್ರಗಳು:
ಇಂದ್ರ, ಅಗ್ನಿ, ವಾಯು, ವರುಣ, ನಿಋತಿ, ವಿದಲ, ಉತ್ಪಲ, ಸುಬಲ (ಮಂತ್ರಿ), ಪ್ರಬಲ (ದಳಪತಿ), ಶುಕ್ರಾಚಾರ್ಯ, ರಂಭೆ, ಊರ್ವಶಿ, ಮನ್ಮಥ, ಬ್ರಹ್ಮ, ದೂತ, ವಿಷ್ಣು, ಈಶ್ವರ, ಅಂಬಿಕೆ (ದೇವಿ), ಕುಸುಮ ಮಂಜರಿ, ಭದ್ರ (ಗಂಧರ್ವ), ನಾರದ, ಗಣಪತಿ, ಸ್ಕಂದ, ವೀರಭದ್ರ, ಕಾಲಭೈರವ, ಶಾಕಿನಿ ಡಾಕಿನಿ ಬಳಗ

ಕಥಾ ಸಾರಾಂಶ:
ಶೋಣಿತದಲ್ಲಿ ವಿದಲ ಹಾಗೂ ಉತ್ಪಲರೆಂಬ ರಾಕ್ಷಸರು ಪ್ರಬಲರಾಗಿ ಮೆರೆಯುತ್ತಾ ಸ್ವರ್ಗಕ್ಕೆ ಧಾಳಿಯಿಡಲು ಯೋಚಿಸಿದರು. ಆಗ ದೈತ್ಯಗುರು ಶುಕ್ರರ ಮಾತಿನಂತೆ ಬ್ರಹ್ಮನ ಕುರಿತು ತಪಸ್ಸಿಗೆ ಕುಳಿತರು. ಇವರ ತಪೋಭಂಗಕ್ಕಾಗಿ ದೇವೇಂದ್ರ ರಂಭೆ, ಊರ್ವಶೀ ಹಾಗೂ ಮನ್ಮಥರನ್ನೇ ಕಳುಹಿಸಿದರೂ ವ್ಯರ್ಥಪ್ರಯತ್ನವಾಯಿತು. ತಪಸ್ಸಿಗೊಲಿದ ಬ್ರಹ್ಮ ಪ್ರತ್ಯಕ್ಷನಾದಾಗ, ಗಂಡಸರಿಂದ ಮರಣಬಾರದ ತೆರ ವರ ಪಡೆದರು ವಿದಲೋತ್ಪಲರು! ನಂತರ ಸ್ವರ್ಗಕ್ಕೆ ಧಾಳಿಯಿಟ್ಟು ಅಲ್ಲಿಯ ಅಧಿಕಾರ ಪಡೆದು ಮೆರೆಯಲಾರಂಭಿಸಿದರು. ಸೋತ ದೇವತೆಗಳು ಮೂರು ಮೂರ್ತಿಗಳ ಮೊರೆಹೊಕ್ಕಾಗ, ವಿಷ್ಣುವಿನ ಸೂಚನೆಯಂತೆ ಶ್ರೀದುರ್ಗಾದೇವೀ ಅಲ್ಲಿಗೆ ಬಂದು ಅಭಯ ನೀಡುವಳು.

ಗಂಧರ್ವಕನ್ಯೆ ಸುಮಮಂಜರಿಯನ್ನು ಅಸುರರು ಪೀಡಿಸಿದಾಗ, ಗಂಧರ್ವರಾಜನು ಮಾಯೆಯಿಂದ ಅವಳನ್ನು ರಕ್ಷಿಸುವನು. ಮುಂದೆ ನಾರದರ ಸೂಚನೆಯಂತೆ ವಿದಲನು ಶಿವನರಸಿ ಪಾರ್ವತಿಯಿಂದ ಶುಂಭನಿಶುಂಭಾದಿಗಳ ಹನನದ ವಿಷಯವರಿತು, ಕೈಲಾಸಕ್ಕೆ ಹೋಗಿ ಅಲ್ಲಿ ಹರನ ಗಣಗಳನ್ನು ಸೋಲಿಸಿ, ಘನಘೋರ ಯುದ್ಧದಲ್ಲಿ ಅಂಬಿಕೆಯಿಂದ ಆ ಅಸುರರಿಬ್ಬರೂ ನಾಶವಾಗುವರು.

ಮುಂದಕ್ಕೆ ಆ ಅಂಬಿಕಾಶಕ್ತಿ ಕಾಶಿ ಕ್ಷೇತ್ರದಲ್ಲಿ ಲಿಂಗರೂಪಿನಿಂದ ಲೋಕವನ್ನು ಪೊರೆಯುವ ಮಹಿಮಾನ್ವಿತ ಕಥಾನಕ.

ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)
ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರವರು ಕಾಸರಗೋಡು ತಾಲೂಕಿನ ಕುಂಬುಡಾಜೆ ಗ್ರಾಮದವರು. ಇವರ ಕಾಲ ೧೯೧೩ – ೧೯೮೬. ತಂದೆ ಕೇಶವ ಭಟ್ಟ ಮತ್ತು ತಾಯಿ ಲಕ್ಷ್ಮಿ. ಕಾದಂಬರಿ, ಕಾವ್ಯ, ಆತ್ಮಕಥೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಶ್ರೀಯುತರು ನಮ್ಮ ನಾಡಿನ ಖ್ಯಾತ ಯಕ್ಷಗಾನ ಅರ್ಥಧಾರಿಗಳು ಹೇಗೋ, ಹಾಗೆಯೇ ಖ್ಯಾತ ಯಕ್ಷಗಾನ ಕವಿಗಳು ಕೂಡ. ಯಕ್ಷಗಾನ ಅರ್ಥಗಾರಿಕೆಯಲ್ಲಿ ಶೇಣಿ ಶೈಲಿ, ದೇರಾಜೆ ಶೈಲಿ ಎಂದೆಲ್ಲ ನಾವು ಗುರುತಿಸುವ ಹಾಗೆ ಕೀರಿಕ್ಕಾಡು ಮಾಸ್ತರ್ ಶೈಲಿಯನ್ನೂ ಪ್ರತ್ಯೇಕವಾಗಿ ಗುರುತಿಸಬಹುದು. ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರು ಸೇರಿದಂತೆ ಅವರ

ಶಿಷ್ಯರನೇಕರು ಇಂದು ಯಕ್ಷರಂಗಭೂಮಿಯಲ್ಲಿ ಉತ್ತಮ ಕಲಾವಿದರಾಗಿ ವಿಜೃಂಭಿಸುತ್ತಿದ್ದಾರೆ. ಅವರು ಯಕ್ಷಗಾನದ ಆಶುಕವಿಗಳು. ಪ್ರಸಂಗ ರಚನೆಯ ಮಟ್ಟಿಗೆ ಅವರದು ಗಿನ್ನಿಸ್ ದಾಖಲೆಯೆಂದರೂ ತಪ್ಪಾಗಲಾರದು.

ಇವರು ಬರೆದ ಪ್ರಸಂಗಗಳು: ಅಂಬಾಲಿಕಾ, ಅಂಬಿಕಾ ಮಹಾತ್ಮೆ (ದುರ್ಗಾ ಮಹಾತ್ಮೆ), ಅಮೋಘ ವರ್ಷ ನೃಪತುಂಗ, ಅಶೋಕ ಸುಂದರಿ, ಅಶ್ರುಬಿಂದುಮತಿ, ಅಷ್ಟಾಕ್ಷರೀ ಮಹಿಮೆ (ರತ್ನಗ್ರೀವ), ಇಂದ್ರೋತ್ಕರ್ಷ, ಇಕ್ಷ್ವಾಕು ವಿಜಯ, ಊರ್ವಶಿ ಪುರೂರವ, ಏಕವೀರ ಏಕಾವಳಿ, ಕಂಜಾಕ್ಷಿ ಕಲ್ಯಾಣ, ಕಂದುಕಾವತಿ, ಕಚೋಪಖ್ಯಾನ, ಕನಕಲೇಖಾ, ಕರ್ಣಾವಸಾನ, ಕಲ್ಪಸುಂದರಿ ಕಲ್ಯಾಣ (ಉಪಾಹಾರವರ್ಮ ವಿಜಯ), ಕಾಮೋದೆ, ಕಾಲನೇಮಿ ಕಾಳಗ, ಕಾಲಯವನ ಕಾಳಗ, ಕುಲಬಾಲಿಕಾ, ಕುಶಲವ, ಕ್ಷೇಮಂಕರೀ ದೇವಿ ಮಹಿಮೆ, ಗಜಾಸುರ ಮೋಕ್ಷ, ಗೋಕರ್ಣ ಕ್ಷೇತ್ರ ಮಹಾತ್ಮೆ, ಗೌತಮ ವಿಜಯ, ಚಂದ್ರಪ್ರಭಾ ಪರಿಣಯ, ಚಂದ್ರಸೇನಚಿಂತಾಮಣಿ, ಚಂದ್ರಹಾಸ, ಜಯಸಿಂಹ ವಿಜಯ, ಜರಾಸಂಧ ಪರಾಭವ, ಜಾನಭ ಚರಿತ್ರೆ, ದುರ್ಗಾ ಮಹಿಮೆ (ಅಂಬಿಕಾ ಮಹಾತ್ಮೆ), ದುರ್ಜಯೋಪಖ್ಯಾನ, ದೂಷಣಾಸುರ ಕಾಳಗ, ನವಮಾಲಿಕಾಪರಿಣಯ, ಪಂಚಾಕ್ಷರಿ ಮಹಾತ್ಮೆ, ಪಾಂಚಜನ್ಯ, ಪುಷ್ಪವೇಣಿ ಕಲ್ಯಾಣ, ಪುಷ್ಪೋದ್ಭವ, ಪ್ರದೋಷ ವ್ರತ ಮಹಾತ್ಮೆ, ಪ್ರಭಾವತಿ ಪರಿಣಯ, ಬಭ್ರುವಾಹನ, ಬಾಲಚಂದ್ರಿಕಾ, ಬೃಹ್ಮ ಯಜ್ಞ (ಗಾಯತ್ರಿ ಮಹಿಮೆ) (ಗಾಯತ್ರಿ ಪರಿಣಯ), ಭಕ್ತ ಪ್ರಹ್ಲಾದ, ಭಕ್ತ ಸುಬಾಹು, ಭಕ್ತ ಸುಮದ (ಶ್ರೀ ರಾಮಾಶ್ವಮೇಧದ ಭಕ್ತ ಸುಮದ), ಭಕ್ತ ಸುರಥ, ಭಾನುಮತಿ ಪರಿಣಯ, ಭೀಮಶಂಕರ ಮಹಿಮೆ, ಭ್ರಮರಕುಂತಳೆ ಕಲ್ಯಾಣ, ಭ್ರಮರವೇಣಿ ಸ್ವಯಂವರ, ಮಂಜುವಾಹಿನಿ, ಮಣಿಕರ್ಣಿಕಾ, ಮಣಿಪ್ರಭಾ ಪರಿಣಯ, ಮದ್ಯೋಚ್ಚಾಟನ, ಮಿತ್ರಗುಪ್ತ ವಿಜಯ, ಮೃಗಾವತಿ ಪರಿಣಯ (ವೀರ ಸಹಸ್ರಾನಿಕ), ರಕ್ಷರತ್ನಾಹಾರ (ಹರಿರತ್ನಹಾರ), ರಕ್ಷಾಕವಚ (ತುಳಸಿ ಶಂಖಚೂಡ), ರಕ್ಷಾಮಣಿ (ದುರ್ಜಯೋಪಖ್ಯಾನ), ರಘುನಾಥ ವಿಜಯ, ರಜಿಯಾಭ್ಯುದಯ, ರಣಮಲ್ಲವಿಜಯ, ರತ್ನ ಪ್ರಭಾ, ರಾಜಹಂಸ ಪರಾಜಯ (ರಾಜವಾಹನ ವಿಜಯ), ರಾಜಹಂಸ ವಿಜಯ, ರಾಜಾ ಸುದರ್ಶನ, ರಾಜೇಯ ಪರಾಜಯ, ರುಕ್ಮವತೀ ಕಲ್ಯಾಣ, ವಾಮಲೋಚನೆ, ವಿಶ್ರುತ ವಿಜಯ, ವೀರ ಅಭಿಮನ್ಯು, ವೀರ ಬಭ್ರುವಾಹನ, ವೀರ ವಜ್ರಾಂಗ, ವೀರಮಣಿ, ವೀರಮಣಿ ಕಾಳಗ, ವೀರರಮಣಿ, ವೀರೇಶ್ವರ, ವ್ಯಾಘ್ರಾಸುರ ಕಾಳಗ (ವ್ಯಾಘ್ರಾಸುರ ಮೋಕ್ಷ), ಶಿವ ಕವಚ, ಶಿವನಾಮ ಮಹಿಮೆ (ಶಿವಭಕ್ತ ಸುಪ್ರಿಯ), ಶಿವಪಂಚಾಕ್ಷರಿ ಮಹಾತ್ಮೆ (ಶ್ವೇತಕುಮಾರ ಮಹಿಮೆ), ಶಿವಮಂತ್ರ ಮಹಿಮೆ (ದಾಶಾರ್ಹ ಚರಿತೆ), ಶುಭಾಂಗಿ, ಶೃಗಾಲ ಕಾಳಗ, ಶ್ರೀಮತೀ ಪರಿಣಯ (ಸಹಸ್ರಕಂಠ ರಾವಣ), ಶ್ರೀರಾಮಪಟ್ಟಾಭಿಷೇಕ, ಷಟ್ಪುರ ಮಥನ, ಸಾಹಸಚಂದ್ರ, ಸಾಹಾಸಾಂಬ, ಸೀತಾ ಪರಿತ್ಯಾಗ, ಸೀತಾಪಹಾರ, ಸೀತಾರಾಮವಿಜಯ, ಸೀತಾವಿಜಯ, ಸೀಮಂತಿನೀ ಕಲ್ಯಾಣ, ಸುಮದಾಖ್ಯಾನ, ಸುಲೋಚನಾ ಸ್ವಯಂವರ, ಸೊಲಗಾವಸಾನ, ಸೋಮದತ್ತ ವಿಜಯ, ಸ್ವಯಂಪ್ರಭಾ ಪರಿಣಯ, ಸ್ವಾಮಿನಿಷ್ಠ ಎಚ್ಚಮ, ಹೇತ್ರ ಪ್ರಹೇತ್ರ

ಟಿಪ್ಪಣಿ:

ಪ್ರಸಂಗ ಸಾಹಿತ್ಯ

ಶಾರ್ದೂಲ ವಿಕ್ರೀಡಿತ ವೃತ್ತ
ಶ್ರೀ ವಿಷ್ಣುಂ ವಿಜಯಾರ್ಚಿತಂ ವಿಧಿಪಿತಂ ವಿಶ್ವೇಶ್ವರಂ ಕೇಶವಂ |
ದೇವೇಂದ್ರಾದಿ ಸಮಸ್ತ ದೇವ ನಮಿತಂ ನಾರಾಯಣಂ ಮಾಧವಂ |
ಲಾವಣ್ಯಾಧಿಕ ಶೋಭಿತೋಜ್ವಲವಪುಂ ಗೋವರ್ಧನೋದ್ಧಾರಣಂ |
ಗೋವಿಂದಂ ಗರುಡಧ್ವಜಂ ಮುರಹರಂ ಗೋಪಾಲಕೃಷ್ಣಂ ಭಜೇ || ೧ || 1 ||

ಭಾಮಿನಿ
ಗಜವದನ ಹೇರಂಬ ಗಣಪನ |
ಭಜಿಸಿ ಪೂಜಿಸಿ ಭಾರತಿಗೆ ಮಣಿ |
ದಜಭವರ ಕೊಂಡಾಡುತಂಬಿಕೆಯಂಘ್ರಿಗಭಿನಮಿಸಿ ||
ಭುಜಗಶಯನನ ದಿವ್ಯ ಪಾದಾಂ |
ಭುಜವ ಸ್ಮರಿಸುತ ಗುಹನನರ್ಚಿಸಿ |
ಸೃಜಿಸುವೆನು ಕೃತಿಯಿದನು ಮುನಿಪುರ ಹರಿಯ ಕರುಣದಲಿ || ೧ || 2 ||

ಸೌರಾಷ್ಟ್ರ - ತ್ರಿವುಡೆ
ಸೂತ ಶೌನಕ ಮುಖ್ಯ ಮೌನೀ |
ವ್ರಾತಕುತ್ತಮ ಶಿವಪುರಾಣವ |
ಪ್ರೀತಿಯಿಂದುಸುರುತಿರೆ ನೈಮಿಷ | ಖ್ಯಾತ ವನದಿ || ೧ ||

ಒಂದು ದಿನ ವಿದಲೋತ್ಪಲರ ಶೈ |
ಲೇಂದ್ರ ಸುತೆ ಕೊಂದೆಸೆದ ಚರಿತೆಯ |
ನಿಂದೊರೆವೆನೆಂದರುಹತೊಡಗಿದ | ನಂದದಿಂದ || ೨ || 4 ||

ಭಾಮಿನಿ
ಕೇಳಿರೈ ಮುನಿವರರು ಸ್ವರ್ಗವ |
ನಾಳುತಿರೆ ವಾಸವನು ವೈಭವ |
ದೇಳಿಗೆಯೊಳವನೊಂದು ದಿನ ರಂಜಿಸುವ ಸಭೆಯೊಳಗೆ ||
ತಾಳಮದ್ದಳೆ ಗಾನ ಕೀರ್ತನ |
ಮೇಳದಪ್ಸರೆಯರ ಸುನರ್ತನ |
ಮೇಳವಿಸೆ ಸುರರುಲಿಯಲೋಲಗವಿತ್ತನುತ್ಸವದಿ || ೧ || 5 ||

ನಾಟಿ - ಝಂಪೆ
ಉತ್ಸವದಳೋಲಗವ | ನಿತ್ತು ಪೇಳಿದ ಮಘವ |
ನೆತ್ತಿ ಹರುಷದ ಮೊಗವ | ಮಿತ್ರರೊಡನೊಳವ || ೧ ||

ಸಪ್ತ ದಿಕ್ಪಾಲಕರೆ | ತೃಪ್ತಿಯಾಯ್ತೆನಗೆ ಖರೆ |
ಪತ್ತನವನಡರುವರೆ | ದೈತ್ಯರೀಗಿಹರೆ || ೨ ||

ಹರಿಹರವಿರಿಂಚಿಯರ | ಕರುಣೆ ಸಂಪೂರ್ಣವಿರ |
ಲರಿಗಳಂಜಿಕೆಯೇರ | ಸುರರ ಬಾಯಾರ || ೩ ||

ಶತಯಾಗ ಗೈದು ಸುರ | ಪತಿಯೆಂಬ ಘನ ಪೆಸರ |
ಪತಿಕರಿಸಿದೆನು ಸಾರ | ಪುಣ್ಯಸಾರ || ೪ || 9 ||

ಕಂದ
ಬಪ್ಪವರಿಲ್ಲವು ನಿಮ್ಮಿದಿ |
ರೊಪ್ಪುವಿರೇ ನೀವಿದಕ್ಕೆಯರುಹುವುದೆನಲುಂ ||
ದೊಪ್ಪನೆಯೆದ್ದಗ್ನಿಯು ಮನ |
ದರ್ಪದೊಳೆಂದಂ ವಿಚಾರಶೀಲತೆಯಿಂದಂ || ೧ || 10 ||

ಭೈರವಿ - ಏಕ
ಸುರಪನೆ ನೀ ಶತಯಾಗ | ಗೈ |
ದಿರುವುದು ಪುಣ್ಯ ಸುಯೋಗ ||
ಸರಿಯದು ಹರಿಹರ ಬ್ರಹ್ಮ | ಮೂ |
ವರು ಕಾವರು ಬಿಡದೆಮ್ಮ || ೧ ||

ದೈತ್ಯರಾದರೂ ಇತ್ತ | ದಂ |
ಡೆತ್ತರು ಬಂದರು ವ್ಯರ್ಥ ||
ನಿತ್ಯಾನಿದಿರೋಡಿಸುವೇ | ವಿಜ |
ಯೋತ್ಸವವನೆ ರೂಢಿಸುವೇ || ೨ ||

ಮರುತನೊರೆದನಹುದಹುದು | ಬಾ |
ರರು ಬರೆ ಶೌರ್ಯವದಿಹುದು ||
ದುರುಳರ ಭಯಕೆಡೆಗೊಡರು | ಹರಿ |
ಹರ ಬ್ರಹ್ಮರು ಕೈ ಬಿಡರು || ೩ ||

ಪ್ರಾಣ ಸ್ವರೂಪನು ನಾನು | ಎನೆ |
ತ್ರಾಣದಿ ಬಿಡೆನೇನೇನು ||
ದಾನವ ಭಟರೆನಗೆಣೆಯೆ | ಇದಿ |
ರಾನಲಿಕಿದೆ ಕೂರ್ಗಣೆಯೆ || ೪ || 14 ||

ಭೈರವಿ - ಅಷ್ಟ
ವರುಣ ಯೋಚಿಸುತೆಂದನು | ನಮ್ಮಿಯ ಸ್ವರ್ಗಾ |
ವರುಣದಿ ಮಾತೊಂದನು ||
ಸುರಪಾಲನೆನಲದ | ಕರುಹಲು ಪ್ರತಿವಾದ |
ಕಿರುವನೆ ಸುಭಟ ಯೋಧ || ೧ ||

ಬಪ್ಪವರಿಲ್ಲವಿತ್ತ | ಬಂದರು ಬಲ |
ದರ್ಪವದಿಲ್ಲ ವ್ಯರ್ಥ ||
ಅಪ್ಪಳಿಸುತ ಯಮ | ಗೊಪ್ಪಿಪೆ ನಾ ಕ್ರಮ |
ತಪ್ಪದ ಸಮರ ಭೀಮ || ೨ ||

ನಿರುತಿಯಾ ಕ್ಷಣದಿ ಪೇಳ್ದ | ಸಾಹಸಿಯು ನಾ |
ನಿರುತಿರೆ ಪುರಕೆ ಬದ್ಧ ||
ನಿರತ ಸೇವಕನಾಗಿ | ಬರೆ ಖಳರಸು ನೀಗಿ |
ತೆರಳುವರತ್ತ ಕೂಗಿ || ೩ ||

ಹರಿಹರ ಬ್ರಹ್ಮರಂತು | ನಮ್ಮನು ನಿತ್ಯ |
ಪೊರೆಯುವರಸುರರೆಂತು ||
ಬರುವರು ಬಾರರು | ಭರವಸೆಯೀವೆನು |
ಧುರಕಂಜೆನೆಂದು ನಾನು || ೪ || 18 ||

ಭಾಮಿನಿ
ಇಂತವರು ಪೇಳಲ್ಕೆ ಸುಮನಸ |
ಕಾಂತ ಭಲೆ ಮೆಚ್ಚಿದೆನು ನಿಮ್ಮ ಮ |
ಹಾಂತ ಬೆಂಬಲವೆನಗೆ ರಕ್ಷಾಕವಚವೆಂದೆನುತ ||
ಮಂಥನದ ವಿಷಯದಲಿ ವಿಜಯವ |
ನಾಂತು ಸಭೆಯ ವಿಸರ್ಜಿಸುತ ವಿ |
ಶ್ರಾಂತಿಗೈದಿದನೆಲ್ಲರಂ ಬೀಳ್ಕೊಟ್ಟು ಸಂತಸದಿ || ೧ || 19 ||

ಸೌರಾಷ್ಟ್ರ - ತ್ರಿವುಡೆ
ಇತ್ತಲಿವರಿಂತಿರಲು ಸೌಖ್ಯದೊ |
ಳತ್ತ ವಿದಲಾಸುರನು ಶೋಣಿತ |
ಪತ್ತನದೊಳುತ್ಸವದೊಳೋಲಗ | ವಿತ್ತನಾಗ || ೧ ||

ಸಭೆಯೊಳೊಪ್ಪಿರಲನುಜನುತ್ಪಲ |
ಸುಬಲ ಮಂತ್ರೀಶ್ವರ ದಳಾಧಿಪ |
ಪ್ರಬಲ ಮುಖ್ಯರು ಖಳನು ತನ್ನಯ | ವಿಭವ ನೋಡಿ || ೨ ||

ಅನುಜ ಮುಖ್ಯರಿಗೆಂದ ನಮ್ಮೀ |
ಘನತರದ ವೈಭವಕೆ ಲೋಕದೊ |
ಳೆಣೆಯದಿಲ್ಲವು ಕೀರ್ತಿಕಾಮಿನಿ | ಕುಣಿವಳಿಲ್ಲೀ || ೩ ||

ಆದರಾ ದಾಯಾದಿಗಳು ಸ್ವ |
ರ್ಗಾಧಿಪತ್ಯದಿ ಮೆರೆಯುವರು ಮಘ |
ವಾದಿಗಳು ಎನೆ ನಮಗೆ ಲಾಂಛನ | ವಾದುದೈಸೆ || ೪ ||

ಹಕ್ಕು ಹಿರಿ ಭಾಗಕ್ಕೆ ಯೋಚಿಸೆ |
ದಕ್ಕಬೇಕದು ನಮಗೆ ನಮ್ಮಯ |
ರಾಕ್ಷಸರು ಹೊಯ್ದಾಡಿ ಹಿಂದಕೆ | ಸಿಕ್ಕದಾಯ್ತು || ೫ ||

ಹೊಡೆದು ದಿವಿಜರನಟ್ಟಿ ನಾವೇ |
ಪಡೆಯಬೇಕಿದಕೇನನೆಂಬಿರಿ |
ತೊಡಗೆ ಕಾರ್ಯವನೆನಲಿಕುತ್ಪಲ | ನುಡಿದನೆದ್ದು || ೬ || 25 ||

ಭೈರವಿ - ಏಕ
ಸರಿಸರಿ ಸರಿಯಹುದಣ್ಣಾ | ನೀ |
ನೊರೆದುದು ಹುಲು ಮೃಗಣ್ಣ ||
ಸುರಪತಿಯೆನಲಪಮಾನ | ನಮ |
ಗಿರದಿದಕೇನನುಮಾನ || ೧ ||

ಅಪ್ಪಣೆಯಾದರೆ ಕ್ಷಣದಿ | ಹೊಡೆ |
ದಪ್ಪಳಿಸುತ್ತಲಿ ರಣದಿ ||
ದರ್ಪದಿ ವಿಜಯವ ಪಡೆದು | ತಂ |
ದೊಪ್ಪಿಪೆ ಮಘವನ ಪಿಡಿದು || ೨ ||

ಮಂತ್ರಿ ಸುಬಲನುಸುರಿದನು | ನಾ |
ಸಂತಸದಿಂದೊಪ್ಪಿದೆನು ||
ಪಂಥದಿ ಹೊಯ್ದಾಡುವೆನು | ನೆಲೆ |
ನಿಂತವರನು ದೂಡುವೆನು || ೩ ||

ವೃಂದಾರಕರೆಮಗಿದಿರೆ | ಆ |
ಚಂದ್ರಧರಗು ನಾ ಬೆದರೆ ||
ಸಂದೇಹವು ಯಾಕಿದಕೆ | ಜಯ |
ತಂದೀವೆನು ತವ ಪದಕೆ || ೪ ||

ದಳಪತಿ ಪ್ರಬಲನು ನುಡಿದ | ಅಸ |
ದಳವಲ್ಲೀ ಕ್ಷಣ ನಡೆದುದ ||
ಬಲರಿಪು ಮುಖ್ಯರ ಗೆಲುವ | ಮಾ |
ರ್ಬಲ ನಮಗಿದೆ ಕೈಗೊಳುವ || ೫ ||

ಎಂದೋ ಗೈಯುವ ಕಾರ್ಯ | ಅಮ |
ರೇಂದ್ರನೆನಿಪ ಸೌಕರ್ಯ ||
ಹೊಂದಿದವನು ನೀನಿರುತ | ಆ |
ಹಂದೆಗೆ ಸಲದನವರತ || ೬ || 31 ||

ಭಾಮಿನಿ
ಕೇಳುತ್ತೆಲ್ಲವ ವಿದಲ ಸಂತಸ |
ತಾಳಿ ಮೆಚ್ಚಿದೆನೀಗ ಸುರಪುರ |
ಧಾಳಿಗೈದಲು ಸಿದ್ಧತೆಯ ಗೈಯುವಡೆನುತ್ತೇಳೆ ||
ಕಾಳಗಕ್ಕೆದ್ದುದನು ತಿಳಿದು ವಿ |
ಶಾಲಮತಿ ಗುರು ಶುಕ್ರ ಬಂದಾ |
ಖೂಳ ದೈತ್ಯಾಧಿಪನ ತಡೆದಿಂತೆಂದನನುನಯದಿ || ೧ || 32 ||

ಯರಕಲ ಕಾಂಭೋದಿ - ಅಷ್ಟ
ಕೇಳಯ್ಯ ವಿದಲ ನಾ | ಪೇಳುವುದೆಲ್ಲ |
ಕಾಳಗಕೈದಲು | ವೇಳೆಯಿದಲ್ಲ || ಪ ||
ಸುರಪುರವನು ಗೆಲ್ಲು | ವರೆ ಪೊರಡುವ ಗುಲ್ಲು |
ಥರವಲ್ಲ ವೀಗೆಲ್ಲು | ಧುರಕೆಂದು ಸಾಗಲು |
ಸರಿಯಾದ ಸಮಯವಲ್ಲ | ಎನ್ನಯ ಮನ |
ಕರಿಯದ ವಿಷಯವಿಲ್ಲ | ನೀನೀಗನು |
ಸರಿಸುವ ಕಾರ್ಯವೆಲ್ಲ | ಬೇರಿದೆಯದ |
ನರುಹುವೆ ಶ್ರೇಯ | ಸ್ಕರವದು ಮಲ್ಲ || ಕೇಳಯ್ಯ || ೧ ||

ಬರ್ದಿಲರನು ನೀನು | ಸ್ಪರ್ಧಿಸಿ ಗೆಲಲೇನು |
ವರ್ಧಿಸೆ ನಿನ್ನನು | ಮರ್ದಿಸೆ ಬರುವನು |
ರುದ್ರನು ಹರಿಯೊಡನೆ | ಬ್ರಹ್ಮನು ಸಹಿ |
ತಿರ್ದು ರೋಷದೊಳೊಡನೆ | ಯೇನ್ಗೈವುದು |
ಹೋರ್ದರಾಕ್ಷಣ ಮೃಡನೆ | ಭಯಂಕರ |
ರುದ್ರನಕ್ಕವರಿಗೆ ಯುದ್ಧವೇ | ನ್ನಡಣೆ || ಕೇಳಯ್ಯ || ೨ ||

ಅದಕಾಗಿ ತಪದಲಿ | ವಿಧಿಯ ಮೆಚ್ಚಿಸುತಲಿ |
ಕದನ ವಿಕ್ರಮದಲಿ | ವಧೆ ಬರದೊಲ್ಬಳಿ |
ಕದುಭುತ ಶಕ್ತನಾಗಿ | ಬಾಳುವ ವರ |
ವೊದಗಿಸು ಭಯವ ನೀಗಿ | ಮತ್ತೆಲ್ಲರ |
ಕೆದಕಿ ಶೌರ್ಯದಿ ಹೆಣಗಿ | ದಿಗ್ವಿಜಯಿಯ |
ಪ್ಪುದಕೆಡರಿಲ್ಲ ಯಾ | ರಿದಿರಿಗು ಸಾಗಿ || ಕೇಳಯ್ಯ || ೩ || 35 ||

ವಾರ್ಧಕ
ಸೋದರರು ನೀವೀರ್ವರಾ ವಿಧಿಯ ಭಜಿಸಿ ಸಂ |
ಪಾದಿಸಿರಿ ವರವನೆನಲಾ ದುರುಳರೊಪ್ಪುತ ಹ |
ಸಾದವೆಂದೈದಿ ಮೇಲಾದ ಹಿಮಗಿರಿಯೆಡೆಗೆ ನಿಂತು ಪಾದಾಂಗುಟದಲಿ ||
ಸಾಧನೆಯ ತಪದೊಳಾರಾಧಿಸಲ್ವಿಧಿಯನುರಿ |
ಬಾಧೆಯಿಂ ತತ್ತರಿಸೆ ಮೇದಿನಿಯು ಸುರಪ ಸಂ |
ಶೋಧಿಸುತಲದ ನಿಲಿಸೆ ಹಾದಿಯಂ ಹುಡುಕಿ ಮುಂದಾದನಾ ಕಾರ್ಯಕಾಗ || ೧ || 36 ||

ಕಂದ
ಜಂಭ ವಿರೋಧಿಯು ಯೋಚಿಸಿ |
ಸಂಭ್ರಮದಿಂ ರಂಭೆಯೂರ್ವಶಿಯರ ಕರೆಯಲ್ ||
ಕುಂಭ ಕುಚಂಗಳ ಕುಲುಕುತ |
ಜಂಭದೊಳೈತಂದು ಕಾರ್ಯವೇನೆನಲೊರೆದಂ || ೧ || 37 ||

ಕಾಂಭೋದಿ - ಅಷ್ಟ
ರಂಭೆಯೂರ್ವಶಿಯರು ಕೇಳಿ | ನಿಮ್ಮೊ |
ಳೆಂಬೆ ಲಾಲಿಸಿ ಕಾರ್ಯಕೇಳಿ ||
ಕಾಂಬರ ಮನ ಕ್ಷಣ | ತುಂಬುವ ಲಕ್ಷಣ |
ಬಿಂಬಿತದಾನನ | ಸಂಭ್ರಮಕೊಲಿದೆ ನಾ || ೧ ||

ವಿದಲೋತ್ಪಲರು ದುಷ್ಟ ಖಳರು | ಈರ್ವ |
ರದುಭುತ ರೂಪದಗ್ಗಳರು ||
ವಿಧಿಯ ತಪದೊಳೊಲಿ | ಪುದಕಿಚ್ಚಿಸುತ್ತಲಿ |
ಕುದಿಸಿದರುರಿಯಲಿ | ಬೆದರಿಕೆ ನಮಗಿಲ್ಲಿ || ೨ ||

ದೃಢ ಚಿತ್ತದಿಂ ಹಿಮಗಿರಿಯ | ಮೇ |
ಲ್ಗಡೆಗೈವರವರಿಷ್ಟ ಗುರಿಯ ||
ಕೆಡಿಸಿ ನರ್ತನ ಮಾಡಿ | ರೊಡನೆ ಗಾನವ ಹಾಡಿ |
ಕುಡಿನೋಟ ಶರ ಹೂಡಿ | ತಡವರಿಸದೆ ಕಾಡಿ || ೩ || 40 ||

ಸುರುಟಿ - ಏಕ
ರಂಭೆಯೊರೆದಳದಕೆ | ನಾ ಪ್ರಾ |
ರಂಭೆಯೆ ಪೇಳಿದಕೆ ||
ಕಾಂಬೆನು ಹುಲು ಖಳ | ಹುಂಬರ ದೃಢ ಛಲ |
ಶಂಬರಶರವೆಳ | ಕೊಂಬುದು ಮನವೊಳ || ೧ ||

ಹಾಡನೊಂದ ಹಾಡಿ | ನರ್ತನ |
ಮಾಡಿ ಮೋಹ ಹೂಡಿ ||
ಮೂಡಿಸಿ ಭ್ರಮೆ ಕರ | ಜೋಡಿಸಿ ಬಹ ತೆರ |
ಝಾಡಿಸಿ ಧೂರ್ತರ | ದೂಡುವೆ ನಾ ಹೊರ || ೨ || 42 ||

ಕೇದಾರಗೌಳ - ಅಷ್ಟ
ಉಸುರಿದಳಾಗೂ | ವಶಿ ನಾ ಹೇಗೂ |
ಅಸುರರ ಮನ ಕೆಡಿಸಿ ||
ಉಸುರು ಬಲಿದ ಬಿಗು | ಕುಸಿದು ಮೊಗದಿ ನಗು |
ಪಸರಿಪೆ ವಶಪಡಿಸಿ || ೧ ||

ಮರುಳುಗೊಳಿಸಿ ಮನ | ಕೆರಳಿಸಿ ಕಾಮನ |
ಶರ ಕಳುಹಿಸಿ ಗೆಲುವೆ ||
ಅರಿಯೆಯ ಹಿಂದಿನ | ಚರಿತೆಯನಿಂದೆನ |
ಗಿರುವವದೇ ಛಲವು || ೨ ||

ನುಡಿ ದೃಢ ಮಾತಿನ | ಸಡಗರವಲ್ಲೆನ |
ಲೊಡನಾ ಸುರನಾಥ ||
ಕೊಡಲಪ್ಪಣೆ ಕ್ಷಣ | ಕೊಡನೀರ್ವರು ವನ |
ದೆಡೆಗೈದಿದರತ್ತ || ೩ || 45 ||

ಕಂದ
ನಿಂದು ಹಿಮಾಚಲದೊಳು ದೈ |
ತ್ಯೇಂದ್ರರನೀಕ್ಷಿಸಿ ಕರಾಳ ಖಳರಿದಿರಿನೊಳುಂ ||
ಚಂದದಿ ಪಾಡುತಲಾ ಸುಮ |
ಗಂಧಿನಿಯರು ಕುಣಿದರುತ್ಸಾಹಾನಂದದೊಳುಂ || ೧ || 46 ||

ಬೇಗಡೆ - ಆದಿ
ಕುಣಿದರು ಕುಣಿದರು | ಕುಣಿದರೀರುವರು |
ಕುಣಿದರು ಕಾಲ್ಗೆಜ್ಜೆ | ಕಿಣಿಲೆನಲವರು || ಪ ||
ಸೋಗೆ ಮೈಮರೆಯೆ ಕಂ | ಡಾಗ ನರ್ತನವ |
ಬಾಗಿ ಮಾರುತ ಕೊಂಡು | ಸಾಗೆ ಕೀರ್ತನವ | ಕುಣಿದರು ||
ನಾಗನರ್ತನ ನೋಡಿ | ತೂಗಲು ಶಿರವ |
ಕೋಗಿಲೆ ಗಾನ | ಕ್ಕೇಗೆ ಮತ್ಸರವ || ಕುಣಿದರು || ೧ || 47 ||

ಭಾಮಿನಿ
ದುಷ್ಟ ಮೃಗ ಪಕ್ಷಿಗಳು ಸಹಿತ ವಿ |
ಶಿಷ್ಟ ನರ್ತನ ಗಾನಮಂ ಮನ |
ದಿಷ್ಟದಿಂ ಮೆಚ್ಚಿದುವು ಖಳರೆಳ್ಳನಿತು ಕದಲದಿರೆ ||
ನಿಷ್ಠೆಗಚ್ಚರಿಯಿಂದಲಬಲೆಯ |
ರಿಷ್ಟು ಪ್ರಬಲರೆ ತಪದೊಳೀ ಹುಲು |
ಭ್ರಷ್ಟರಿವರಂ ನುಡಿಸಬೇಕೆಂದೆಣಿಸುತುಸುರಿದರು || ೧ || 48 ||

ಕೇದಾರಗೌಳ - ಝಂಪೆ
ಏಳಿರೇಳಿರಿ ನೋಡಿರಿ | ಯಾರೆಂದು |
ಕೇಳಿತೇ ಮನ ನೀಡಿರಿ ||
ಬಾಲೆಯರನೊಡಗೂಡಿರಿ | ಬಂದ ಪೂ |
ಗೋಲನುರಿ ನೀಗಾಡಿರಿ || ೧ ||

ಎಂಥ ಚೆಲುವಿನ ರೂಪವು | ನಿಮ್ಮದು ಮ |
ಹಾಂತವಿನಿತಪರೂಪವು ||
ಅಂತೆ ಬಿಡ ಸ್ಮರರೋಪವು | ನಮ್ಮ ಮೇ |
ಲೆಂತದಿಲ್ಲಾರೋಪವು || ೨ ||

ರಂಭೆಯೂರ್ವಶಿಯರೆನಲು | ರೂಪ ಸೌ |
ರಂಭೆಯರು ಪ್ರೇಮ ಹೊನಲು ||
ತುಂಬಿ ಹರಿವುದ ಕಾಣಲು | ಬನ್ನಿ ಮೃದು |
ಚುಂಬನದಿ ಮನಕಾನಲು || ೩ ||

ಇಂತವರು ಹಲ ವಿಧದಲಿ | ನುಡಿಸಿ ದಣಿ |
ವಾಂತು ನಾಚುತ ಮನದಲಿ ||
ಪಂಥ ಬಿಡುತತ್ತ ಗಮಿಸಿ | ಪೇಳ್ದರು ಜ |
ಯಂತಪಿತಗೆಲ್ಲ ನಮಿಸಿ || ೪ || 52 ||

ಕಂದ
ನುಡಿಯಂ ಕೇಳ್ದಾ ಸುರಪಂ |
ಕುಡುವಿಲ್ಲನ ಕಳುಹಿ ನೋಳ್ಪೆನೆನುತಲಿ ಕರೆಸುತ ||
ನಡೆದುದನರುಹುತ್ತಲಿ ನೀ |
ಕೆಡಿಸಾ ತಪವೆನಲು ಪೇಳ್ದ ಕಾಮಂ ಕನಲಿ || ೧ || 53 ||

ಮಾರವಿ - ಏಕ
ಬಿಡುಬಿಡು ಮಘವನೆ | ದಡಿಗರ ಬಗೆವನೆ |
ಕಡುಹರಿಯೆಯ ನೀನು ||
ಕೆಡಹುವೆ ಜಗವನೆ | ಮೃಡನೇ ಮಿಗುವನೆ |
ತೊಡೆ ನಾ ಬಾಣವನು || ೧ ||

ಹರಿಹರ ಬ್ರಹ್ಮರ | ಮರುಳುಗೊಳಿಸಿ ಹೊರ |
ಹೊರಡಿಸಿ ಸ್ತ್ರೀಯರೆಡೆ ||
ಸರಿಸಿದ ಸ್ಮರಶರ | ದುರುಳರ ಮನಸ್ಥಿರ |
ಮರೆಸುಗು ಗೆಲದೆ ಬಿಡೆ || ೨ ||

ಮಾರನಿಗಿದು ನಿ | ಸ್ಸಾರವು ಭಯವ ನಿ |
ವಾರಿಪೆನೊಡನೀಗ ||
ಸಾರುತ ಜಯಧ್ವನಿ | ಯೇರಿಸಿ ನಾ ದಣಿ |
ವಾರಿಸಿ ಬಹೆ ಬೇಗ || ೩ || 56 ||

ಭಾಮಿನಿ
ಕಾಮನಿಂತರುಹುತಲಿ ಸುರಪನ |
ನೇಮವಂ ಪಡೆದೊಡನೆ ಗಮಿಸು |
ತ್ತಾ ಮಹಾ ಹಿಮಗಿರಿಗೆ ಕಂಡನು ಖಳರ ತಪದಿರವ ||
ತಾಮಸೀಚರರುಗ್ರ ತಪದುರಿ |
ಭೂಮಿಯಂ ಪಸರಿಸುತ ಸುತ್ತಲು |
ವ್ಯೋಮವಡರಿತೆಯರರೆಯೆನುತಾಕ್ಷಣದಿ ಖತಿಗೊಂಡ || ೧ || 57 ||

ಭೈರವಿ - ಏಕ
ಕಾಮನು ಖತಿಗೊಂಡಿಂಥ | ಹುಲು |
ಕಾಮುಕರಿಗೆ ಬಂದಂಥ ||
ಸಾಮರ್ಥ್ಯವು ನನಗಿದಿರೆ | ಈ |
ತಾಮಸ ತಪ ಕೆಡಿಸದಿರೆ || ೧ ||

ಎಂದರವಿಂದಾಸ್ತ್ರವನು | ಬಿಡೆ |
ಸಂಧಿಸಿ ಧನುವಿಂಗವನು ||
ಹಂದದಿರಲು ಖಳರಾಗ | ಮ |
ತ್ತೊಂದು ಶರವ ತೊಡೆ ಬೇಗ || ೨ ||

ಆ ಶರವದು ನಿಲದುಡುಗೆ | ಉಳಿ |
ದಾಶುಗಗಳು ಸೋತಡಗೆ ||
ಬೇಸರದಿಂದೈದಿದನು | ಸ್ಮರ |
ವಾಸವನಿಂಗರುಹಿದನು || ೩ || 60 ||

ಕಂದ
ಸ್ಮರನಿಂತೈದುತ ಸುರಪಂ |
ಗರುಹಲ್ಕನಿತರೊಳು ಬ್ರಹ್ಮನೆಲ್ಲವನರಿತುಂ ||
ನಿರುಪಾಯದಿ ಮೈದೋರ್ದಾ |
ದುರುಳರನೆಚ್ಚರಿಸುತೆಂದ ಮೆಚ್ಚಿದೆನೆನುತಂ || ೧ || 61 ||

ನವರೋಜು - ಏಕ
ಮೆಚ್ಚಿದೆ ಮೆಚ್ಚಿದೆ ಖಳರೆ | ನಿಮ್ಮ |
ನಿಶ್ಚಲ ಭಕ್ತಿಗೆ ಭಳಿರೆ ||
ಅಚ್ಚರಿಯಾದುದು | ಹೆಚ್ಚಿನ ತಪವಿದು |
ಬೆಚ್ಚಿತು ಜಗವದು | ಯಿಚ್ಛೆಯದಾವುದು || ೧ ||

ನುಡಿದರೆ ನಿಮ್ಮಭಿಮತವ | ನಾ |
ಕೊಡುವೆನಿದೋ ಸಮ್ಮತವ ||
ದೃಢವಿದು ಮಾತನು | ಬಿಡನು ವಿಧಾತನು |
ನಡೆಸುವ ಧಾತನು | ಪಡೆಯಿರಿ ಮನದನು || ೨ || 63 ||

ಬೇಗಡೆ – ಝಂಪೆ **(ಭೈರವಿ - ಝಂಪೆ)**
ಎನಲು ಜಯಜಯವೆಂದು | ಮಣಿದವರು ಬಲವಂದು |
ವಿನಯದಿಂದಲಿ ನಿಂದು | ನೆನೆದೊರೆದರೊಂದು || ೧ ||

ಸರಸಿಜೋದ್ಭವ ಕೇಳು | ಪುರುಷರಾರಿಂದಲು |
ಮರಣವೇ ಬರದವೊಲು | ವರವ ಕೊಡುಯೆನಲು || ೨ ||

ಅಸ್ತೆನುತ ಹರಸಿ ವಿಧಿ | ಯತ್ತ ಗಮಿಸಲ್ಕವದಿ |
ಧೂರ್ತರುಬ್ಬುತ ಮನದಿ | ಪತ್ತನಕ್ಕೈದಿ || ೩ || 66 ||

ಭಾಮಿನಿ
ಗುರುವಿಗೆಲ್ಲವನರುಹಿ ಸೈನ್ಯವ |
ನೆರಹಲಾಜ್ಞೆಯ ಪಡೆದು ಮಂತ್ರೀ |
ಶ್ವರ ದಳಾಧಿಪ ಮುಖ್ಯರಂ ಬರಿಸುತಲಿ ಸಜ್ಜಾಗಿ ||
ದುರುಳ ಸೋದರರೀರ್ವರುಂ ಭೀ |
ಕರ ಬಲೌಘವ ಕೂಡುತಾಕ್ಷಣ |
ಪೊರಟು ಸಾರ್ದಮರಾವತಿಯ ಮುತ್ತಿದರು ದುಡುಕಿನಲಿ || ೧ || 67 ||

ಕಂದ
ಮುತ್ತಲ್ಪುರಮಂ ದೈತ್ಯರ್ |
ಭೃತ್ಯರು ತಿಳಿದುದ ವಿಚಾರಿಸುತ್ತರಿವಿವರಂ ||
ಮತ್ತವರೊಳಗೋರ್ವಂ ಸಾ |
ರ್ದತ್ತೋಲಗಕಂ ಬಿಡೌಜಗೆರಗುತ್ತೆಂದಂ || ೧ || 68 ||

ಮುಖಾರಿ - ಏಕ
ಲಾಲಿಸಬೇಕು ಬಿನ್ನಪವ ಎಮ್ಮೊಡೆಯ | ಬಿಡೆ ನಿಮ್ಮಡಿಯಾ |
ಲಾಲಿಸಬೇಕು ಬಿನ್ನಪವ ಎಮ್ಮೊಡೆಯ ||
ಲಾಲಿಸಬೇಕು ದ | ಯಾಳುವೆ ತವಕದ |
ದಾಳಿಯ ತವಕದ | ಲೇ ಲಕ್ಷಿಪುದಿದ || ಲಾಲಿಸಬೇಕು || ೧ ||

ಶೋಣಿತ ಪುರದ ಮದಾಂಧ ರಕ್ಕಸರು | ವಿದಲೋತ್ಪಲರು |
ದಾನವಾಧಿಪರು ಕರ್ಕಶರು ||
ಸೇನೆಸಹಿತ ಪುರ | ಹಾನಿಯ ಮಾಳ್ಪರ |
ದೇನಾಡಂಬರ | ಕಾಣಿಸುವರು ಹೊರ || ಲಾಲಿಸಬೇಕು || ೨ ||

ಸುರಪತಿಯೆಲ್ಲಿಹನವನ್ನೆತರಲಿ | ಪುರವನು ತೆರಲಿ |
ಹೊರೆಕಾಣಿಕೆಯನೆಲ್ಲ ಮರೆಯದೆ ತರಲಿ ||
ಪರಿಕಿಸಬೇಕೆನು | ತಿರುವರು ೀಕನು |
ಮೆರೆಸಲು ಸಾಕನು | ವರದಲಿ ದುಡುಕನು || ಲಾಲಿಸಬೇಕು || ೩ || 71 ||

ಭಾಮಿನಿ
ದೂತನೆಂದುದ ಕೇಳುತಾ ಪುರು |
ಹೂತನಭಯವಿತ್ತು ಕಳುಹು |
ತ್ತಾತನನು ಖತಿಯಾಂತು ದಿಕ್ಪಾಲಕರನೊಡಗೊಂಡು ||
ಭೂತಳವೆ ನಡುಗಲ್ಕೆ ಸೇನಾ |
ವ್ರಾತಮಂ ಕೂಡುತ್ತ ಖಳರ ನಿ |
ಪಾತಕೈದಲ್ಬಲನಿದಿರಿಸಲೆಂದ ಶಿಖಿ ತಡೆದು || ೧ || 72 ||

ಭೈರವಿ - ಏಕ
ನೀನಾರೆಲ ಖಳ ಧೂರ್ತ | ಈ |
ಸೇನೆ ಸಹಿತ ಬಂದಿತ್ತ ||
ಹಾನಿಗೆ ನಿಂತೆಯ ಮರುಳೆ | ನಿಲೆ |
ಪ್ರಾಣದಿ ಹಿಂದಕೆ ಮರಳೆ || ೧ ||

ಶೋಣಿತ ಪುರಪತಿ ವಿದಲ | ಅವ |
ಗಾನು ಪ್ರಧಾನಿಯು ಸುಬಲ ||
ತ್ರಾಣದೊಳೀ ಪುರ ಪಡೆವೆ | ಸುರ |
ಶ್ರೇಣಿಯ ಧುರದಲಿ ಪೊಡೆವೆ || ೨ ||

ಹತ್ತಿತೆ ಮದವದನಿಳುಹಿ | ಖಳ |
ಮೊತ್ತವ ಯಮನೆಡೆ ಕಳುಹಿ ||
ದೈತ್ಯನೆ ಪ್ರಾಯಶ್ಚಿತ್ತ | ನಿಮ |
ಗಿತ್ತಪೆ ನಾ ದೃಢಚಿತ್ತ || ೩ ||

ನೋಡುವೆ ಸಹಸವನೆಂದು | ಖಳ |
ನಾಡುತ ಬಾಣವನೊಂದು ||
ಹೂಡಲಿಕಾಕ್ಷಣವದನು | ಪುಡಿ |
ಮಾಡುತ ಶಿಖಿ ಕೆಡಹಿದನು || ೪ || 76 ||

ಕಂದ
ದುಶ್ಚರಿತಂ ಹಲವಸ್ತ್ರಗ |
ಳೆಚ್ಚರು ಫಲಿಸದೆ ಬಳಲ್ದು ಸೋತೋಡಲ್ಕಂ ||
ಅಚ್ಚರಿಯಿಂ ಪ್ರಬಲಂ ಕಣ್ |
ಕಿಚ್ಚಂ ಸೂಸುತಲಗ್ನಿಯಂ ತಡೆದೆಂದಂ || ೧ || 77 ||

ಭೈರವಿ - ಅಷ್ಟ
ಭಳಿರೆ ಸಾಹಸಿಯೆ ನೀನು | ಯಾರುಸುರೈ |
ಗೆಲಿದೆಯ ಮಂತ್ರಿಯನು ||
ದಳಪತಿ ಪ್ರಬಲ ನಾ | ನಳುಕೆ ನೋಡೀಕ್ಷಣ |
ಸುಲಭದೊಳಿರಿವೆ ನಿನ್ನ || ೧ ||

ಇರಿಯಲಸಾಧ್ಯವೆನ್ನ | ಅಗ್ನಿಯನು ನೀ |
ನರಿಯೆಯ ರಣದಿ ನಿನ್ನ ||
ಉರಿಸಿ ಭಸ್ಮವ ಮಾಡ | ದಿರೆನು ಸುಮ್ಮನೆ ಮೂಢ |
ಗರುವದ ಮಾತು ಬೇಡ || ೨ ||

ಅಷ್ಟೊಂದು ದುಡುಕದಿರು | ಸಾಗದು ನಿನ್ನ |
ದಿಟ್ಟತೆಯೆನ್ನಿದಿರು ||
ದೃಷ್ಟಿಸುತಿರುಯೆಂದು | ದುಷ್ಟನು ಕಣೆಯೊಂದು |
ಬಿಟ್ಟನಬ್ಬರಿಸಿ ನಿಂದು || ೩ ||

ಅನಲನು ಕಡಿದಿಡಲು | ಬಾಣಾವಳಿ |
ಯನೆ ಪ್ರಬಲನು ಹೂಡಲು ||
ಕ್ಷಣ ಶಿಖಿ ಬಳಲಿದ | ಅನಿಲನಿದಿರು ನಿಲು |
ತಿನಿತೆಂದ ದೈತ್ಯನೊಳು || ೪ || 81 ||

ಮಾರವಿ - ಏಕ
ಅನಲ ಬಳಲೆ ನಾ | ನನಿಲನಿರುವೆನೆನ |
ಗನುವರಕಿದಿರಿಲ್ಲ ||
ಇನಿತಿಹ ವರ್ತನ | ಕಿನಜನ ಪತ್ತನ |
ನಿನಗೊದಗಿಪೆ ಖುಲ್ಲ || ೧ ||

ವಾಯುವೆ ನೀನಸ | ಹಾಯಕನಾನೆಸ |
ವಾಯುಧ ಶರದಿದಿರು ||
ಬಾಯಿಯ ಪೌರುಷ | ಬೇಯದು ಹೋರೆ ಸ |
ಹಾಯಕ್ಕಾರೊದರು || ೨ ||

ಸುಧೆಯೀಂಟಿದ ತನು | ವಿದ ಸದೆವಾತನು |
ವಿಧಿ ಸೃಷ್ಟಿಯೊಳಿಲ್ಲ ||
ಇದಿರಿಸಿದಾತನು | ಬದುಕುವನೇ ನಾ |
ಕದನದ ಕಲಿ ಮಲ್ಲ || ೩ ||

ಪರಿಕಿಪೆ ನಿಲ್ಲೆನು | ತರುಹುತ ಖುಲ್ಲನು |
ಗರುವದಿ ತೆಗೆದಾಗ ||
ಶರ ಬಿಡಲನಿಲನು | ಬರುವಾ ಸರಳನು |
ತರಿದೊಟ್ಟಿದ ಬೇಗ || ೪ || 85 ||

ಭಾಮಿನಿ
ಬಳಿಕ ಪ್ರಬಲಾಸುರನು ಪಂಥದಿ |
ಬಲು ತರದಿ ಹೋರಾಡಿ ಫಲಿಸದೆ |
ಬಳಲಿ ಭಯದಿಂದೋಡೆ ಕಂಡದನುತ್ಪಲಾಂಕ ಖಳ ||
ಬಲುಮೆಯಿಂ ಖತಿ ಮಸಗಿ ಬರುತಿರೆ |
ಬಳಿಯೊಳಿಹ ಕಲಿ ವರುಣ ಕನಲುತ |
ಬಲಿತ ಶೌರ್ಯಾಟೋಪದಿಂದಿದಿರಾಗುತಿಂತೆಂದ || ೧ || 86 ||

ಭೈರವಿ - ಝಂಪೆ
ಭಳಿರೆ ಖಳ ನೀನಾರು | ನೆಲೆನಿಂತ ನಿನ್ನೂರು |
ತಿಳಿಸಿ ಹಿಂದಕೆ ಸಾರು | ನಿಳಯವನೆ ಸೇರು || ೧ ||

ಶೋಣಿತಾಪುರದನುಜ | ಶ್ರೇಣಿಯಧಿಪತಿಯನುಜ |
ನಾನುತ್ಪಲಾಂಕ ನಿಜ | ತ್ರಾಣಿ ನಿನಗಿನಜ || ೨ ||

ವರುಣ ನಾನರಿತು ನುಡಿ | ಬರಿದೆ ಗರ್ವವನಾಡಿ |
ದರೆ ಫಲಿಸದೀ ನಾಡಿ | ಗೆರಗು ಕರ ನೀಡಿ || ೩ ||

ಕರವೀವೆ ಶರ ಮುಖದಿ | ಒರೆದೆನ್ನ ಸಮ್ಮುಖದಿ |
ಗರುವವನು ನೀ ಸುಖದಿ | ತೆರಳೆ ಬಿಡೆ ಕಾದಿ || ೪ ||

ಎಂದು ಗರ್ಜಿಸುತ ದೊಣೆ | ಯಿಂದಸುರ ತೆಗೆದು ಕಣೆ |
ಯೊಂದೆಸೆಯೆ ವರುಣ ಕೊನೆ | ತಂದನದಕೊಡನೆ || ೫ || 91 ||

ಕಂದ
ದುರುಳನೊಳೀತೆರ ಕಾದುತ |
ವರುಣಂ ಬಳಿಕರಿತು ದೈತ್ಯ ವರಬಲನೆನುತಂ ||
ಮರಳಲ್ಕಂಡದ ನಿರುತಿಯು |
ಧುರಕಿದಿರಾಗುತ ಮದಾಂಧನೊಡನಿಂತೆಂದಂ || ೧ || 92 ||

ಘಂಟಾರವ - ಏಕ
ದುರುಳ ರಕ್ಕಸ ಯುದ್ಧದೊಳೆಮ್ಮಯ | ವರುಣನಂ ಗೆಲಿ |
ದಿರಿವಿಯಾಗಲಿ | ಧುರಕೆ ನಾನಿಹೆ ಕಡುಗಲಿ || ೧ ||

ಕಲಿಗಳೆಷ್ಟೋ ಮಂದಿಗಳೀ ತೆರ | ಗಳಹಿ ಮಡಿದರು |
ಬಲುಮೆ ಸಲದುರು | ಬಲನು ನಾನಿದ ತಿಳಿದಿರು || ೨ ||

ತಿಳಿವೆನೆಲ್ಲವನಾದರೆ ಯೆಮ್ಮೊಳು | ಫಲಿಸದಮರರು |
ಬಲದೊಳಮರರು | ಗೆಲುವಿನಿಂದಲೆ ಮೆರೆವರು || ೩ ||

ಅಮರರೆನ್ನುವ ಗರ್ವವೆ ನಿಲ್ಲೆಂದು | ಕುಮತಿ ಶರ ಬಿಡೆ |
ದಮನಕಾಕಡೆ | ಕ್ರಮದಿ ನಿರುತಿಯು ತರಿದಿಡೆ || ೪ || 96 ||

ಭಾಮಿನಿ
ಚಿತ್ರವಿಸಿ ಮುನಿವರರು ಬಳಿಕಾ |
ದೈತ್ಯನೊಳು ಹೊಯ್ದಾಡಿ ನಿರುತಿಯು |
ಸತ್ವ ಕುಂದುತ ತೊಲಗೆ ಕಂಡದನೊಡನೆ ಖಾತಿಯಲಿ ||
ವೃತ್ರಹರ ವಜ್ರಾಯುಧವ ತಿರು |
ಹುತ್ತ ಬರೆ ವಿದಲಾಸುರನು ಮುಂ |
ದೊತ್ತಿ ತಾನೇ ತಡೆದು ಗರ್ಜಿಸುತೆಂದ ಸುರಪತಿಗೆ || ೧ || 97 ||

ತುಜಾವಂತು - ಮಟ್ಟೆ
ನಿಲ್ಲೆಲಾ ಗಜೇಂದ್ರ ವಾಹನ || ಪ ||
ನಿಲ್ಲೆಲಾ ಸುರೇಶ ರೋಷ | ದಲ್ಲಿ ಪೋಪುದೆತ್ತ ವಿರಸ |
ಸಲ್ಲ ಶೋಣಿತಾ ಪುರೇಶ | ಸೊಲ್ಲುತಿಹುದ ಕೇಳು ಹರುಷ |
ಗೊಳ್ಳುತಿತ್ತು ಪುರವ ಬಾಗುತ | ಗೌರವಿಸುತ |
ಲೆಲ್ಲ ಕಾಣಿಕೆಯ ನೀಡುತ | ಕೆಡದಿರಿಂಥ |
ಮಲ್ಲತನದ ಮದದಿ ಬೀಗುತ || ೧ ||

ಮುಚ್ಚು ಬಾಯ ಬರಿದೆಯಿಂಥ | ಹುಚ್ಚುತನದ ಚಿಲುಮೆಯಾಂತ |
ತುಚ್ಛ ನಿನಗೆ ಬೇಡ ಪಂಥ | ಸ್ವಚ್ಛತೆಯಲಿ ಪಾಲಿಪಂಥ |
ಉಚ್ಛ ಸ್ಥಾನ ಪಡೆವ ಯೋಚನೆ | ಬಂತೇಕೆ ನಿನ್ನ |
ಕೆಚ್ಚಿಗಂಜೆ ಫಲಿಸಯಾಚನೆ | ಸುಮ್ಮನಿಲ್ಲ |
ಬಚ್ಚದೈದು ಗೃಹಕೆ ನೀಚನೆ || ಸಾರೆಲಾ ಮದಾಂಧ ದಾನವ || ೨ ||

ಸಾಗೆ ಬರಿದೆ ನಾವು ಹಿರಿಯ | ಭಾಗದವರು ಪುರದ ಹೊರೆಯ |
ನೀಗಲೆಂತು ಭಾಗ್ಯ ಸಿರಿಯ | ಭೋಗಕರ್ಹರಿರಲು ಕಿರಿಯ |
ನಾಗಿ ನೀನು ಪೊರೆಯೆ ಪತ್ತನ | ತಪ್ಪುಹುದು ನ್ಯಾಯ |
ತೂಗಿ ನೋಡು ಗೈದ ವರ್ತನ | ಈ ದೋಷ ಸರಿಸೆ |
ಬೇಗ ಮಾಡು ದೈವ ಕೀರ್ತನ || ನಿಲ್ಲೆಲಾ || ೩ ||

ಯಾಗ ಶತವ ಗೈದ ಪುಣ್ಯ | ಯೋಗದಿಂದಲಿಂಥ ಗಣ್ಯ |
ಭೋಗ ಪಡೆದನಲ್ಲದನ್ಯ | ಥಾ ಘನತ್ವವಲ್ಲ ಧನ್ಯ |
ನಾಗಿ ಮೆರೆವೆನಿದನು ಕೇಳಲು | ಸಿಗದು ಇನ್ನು ನೀನು ಯುದ್ಧಕೇಳಲು |
ಜೈಸಿ ಹಿಂದೆ | ಸಾಗೆ ನಿನ್ನ ದೇಶಕಾಳಲು ||
ಸಾಗೆಲಾ ಮದಾಂಧ ದಾನವ || ೪ || 101 ||

ಭೈರವಿ - ಏಕ
ಸಾಕೊದರದಿರೆಲೊ ಮಘವ | ಬಿಡೆ |
ಠೀಕಿಂದೆತ್ತಲು ಮೊಗವ ||
ನಾಕವ ಪಡೆದಾಳುವೆನು | ಹೊರ |
ನೂಕುವೆ ಸುರ ಬಳಗವನು || ೧ ||

ಇಂತಾಡುತ ಹಲವಾರು | ನಿನ |
ಗಿಂತಲು ಮಿಗಿಲಾದವರು ||
ಹಂತಕ ಖಳರೆನ್ನಿದಿರು | ಮಡಿ |
ದಂತಕನೆಡೆಗೈದಿದರು || ೨ ||

ಅಂಥವರಂತಲ್ಲಾನು | ಬಲ |
ವಂತನು ಭಯವಿಲ್ಲೇನು ||
ಅಂತೆನು ವಿಧಿಯಿಂ ವರವ | ಗೆಲು |
ವಂತೆಲ್ಲರ ಸಂಗರವ || ೩ ||

ವಿಧಿಹರಿಹರರೇ ಪೊರೆವ | ಕ್ರಮ |
ವಿಧಿಯಿಂ ಕೊಟ್ಟರು ಪುರವ ||
ಇದಕೆಡರೀಯಲು ಬಿಡರು | ನಿ |
ನ್ನಧಟತನಕ್ಕೊಡಬಡರು || ೪ ||

ಹರಿಹರಬ್ರಹ್ಮರೆ ಬರಲಿ | ನಾ |
ನೊರೆವೆನು ನಿಂತನಿಬರಲಿ ||
ತೆರದಿರೆ ಪುರ ಸೆಣಸುವೆನು | ಇದಿ |
ರಿರದೋಲತಿ ದಣಿಸುವೆನು || ೫ ||

ಇದು ನಿನಗಂತ್ಯದ ಬುದ್ಧಿ | ವೈ |
ರದ ಬಲೆಯೊಳು ನೀ ಬಿದ್ದಿ ||
ವಧಿಸುವೆನೀಕ್ಷಣ ನೋಡು | ಸಹ |
ಸದಿ ಶರಕೆದೆಯನು ನೀಡು || ೬ ||

ಎನೆ ವಿದಲನು ಶರ ಬಿಡಲು | ಆ |
ಕಣೆಯ ಮಘವ ಕಡಿದಿಡಲು ||
ಕನಲಿ ಸುರಿಸೆ ಖಗವರುಷ | ಖಳ |
ಹಣಿಸಿದನದ ಸುರರರಸ || ೭ || 108 ||

ವಾರ್ಧಕ
ಋಷಿಗಳಾಲಿಸಿರಿ ಬಳಿಕಸುರನೊಳು ಹೋರಾಡಿ |
ಬಸವಳಿದು ಗೆಲಿಕಿನ್ನಸದಳಮೆನುತ್ತರಿತು |
ವ್ಯಸನದಿಂ ಸುರಪಾಲ ನುಸುಳುತಲ್ಲಿಂದ ಹೊರ ದೆಸೆಯಾಣ್ಮರೊಡನೈದಲು ||
ಕುಸಿದು ಬಲ ಸುರರಡಗಲಸಮ ಸಾಹಸಿ ವಿದಲ |
ನೊಸಗೆಯಿಂದನುಜ ರಕ್ಕಸರೊಡನೆ ವಿಜಯ ಬಲ |
ದೆಸುಗೆ ಭರದೋಲಗದೊಳೆಸೆದನಾಸನವೇರುತುಸುರಲೆಂತಾ ಬಿಂಕವ || ೧ || 109 ||

ಸಾಂಗತ್ಯ - ರೂಪಕ
ಅತ್ತಲಾ ಸುರಪಾಲ | ನಾಪ್ತ ದಿಕ್ಪತಿಗಳ |
ಗುಪ್ತದೊಳೊಡಗೊಂಡು ಮರುಗಿ ||
ದೈತ್ಯನು ವರಬಲ | ಸತ್ವದಿಂದಲಿ ಗೆಲ |
ವೆತ್ತಿದ ನಾವೆಲ್ಲ ಸೊರಗಿ || ೧ ||

ಏನೆಸಗುವುದಿನ್ನು | ವಾಣೀಶನನೆ ಮುನ್ನ |
ಕಾಣುವುದೊಳ್ಳಿತೆಂದೆನುತ ||
ಧ್ಯಾನಿಸಿ ಬ್ರಹ್ಮನಾ | ಸ್ಥಾನಕೈದುತ ಬನ್ನ |
ಹಾನಿಯ ಪೇಳೆ ವಂದಿಸುತ || ೨ ||

ಸರಸಿಜೋದ್ಭವ ಕೇಳಿ | ಹರಿಯೊಡನಿದ ಪೇಳಿ |
ಪರಿಹಾರ ಕಾಂಬುದೆಂದವರ ||
ಕರಕೊಂಡೈದುತ ಪಾಲ | ಶರಧಿಯೆಡೆಗೆ ಬಾಳ |
ಸ್ಮರಿಸಿದ ಕೂಡುತೆಲ್ಲವರ || ೩ || 112 ||

ಪಂತುವರಾಳಿ - ಏಕ
ಜಯ ಜಯ ನಾರಾಯಣ | ಜನಾರ್ದನ |
ಜಯ ಜಯ ಫಣಿಶಯನ ||
ಜಯ ಕರುಣಾಕರ | ಜಯ ಖಳಭೀಕರ |
ಜಯ ಮಂಗಲಕರ | ಜಯ ಮಂದರಧರ |
ಜಯ ದಾಮೋದರ | ಜಯ ಸುಮನೋಹರ |
ಜಯ ಭವಭಯಹರ | ಜಯ ಲಕ್ಷ್ಮೀವರ || ಜಯ || ೧ ||

ಸುರಲೋಕವನು ಮುತ್ತುತ | ವಿದಲೋತ್ಪಲ |
ದುರುಳರು ಧುರ ಹಮ್ಮೃತ ||
ಪುರ ನಡುಗಿಸಿ ತರ | ತರದುನ್ನತ ಶರ |
ಧರಿಸುತಲಬ್ಬರ | ಭರದಿಂದಮರರ |
ನಿರದಡಗಿಸಿ ಸುರ | ವರಶಿಖಿ ಮುಖ್ಯರ |
ಹೊರಡಿಸಿದರು ಹೊರ | ಪೊರೆ ನೀ ಶ್ರೀಕರ ||
ಜಯ ಜಯ ನಾರಾಯಣ || ೨ || 114 ||

ಕಂದ
ನಿತ್ತಿಹರಿದೊ ಸುರಪಾದ್ಯರು |
ಇತ್ತಭಯವ ಪಾಲಿಸೆಂದು ವಿಧಿಯೀ ತೆರದಿಂ ||
ಪ್ರಾರ್ಥಿಸಲಮರರು ಸಹಿತಂ |
ಪ್ರತ್ಯಕ್ಷದಿ ಕಾಣಿಸುತ್ತ ಹರಿ ನಗುತೆಂದಂ || ೧ || 115 ||

ಸುರುಟಿ - ಏಕ
ಏಳಿರೇಳಿರೇಳಿ | ಸ್ತುತಿ ಸಾ |
ಕಾಲಿಸಿದೆನು ಕೇಳಿ ||
ಖೂಳರ ಭಯ ಬಿಡಿ | ತಾಳಿರಿ ಗಡಿಬಿಡಿ |
ಗೋಳೇತಕೆ ನುಡಿ | ಪೇಳುವೆ ಕಿವಿಗೊಡಿ || ೧ ||

ಸರಸಿಜಭವನಿವನು | ಖಳರಿಗೆ |
ವರಗಳನಿತ್ತವನು ||
ದುರುಳರ ಕೊಲಲಳ | ಪುರುಷರಿಗಿದನೊಲ |
ವಿರಿಸಿ ಹರಸಿ ಬಲ | ಬರಿಸಿ ದೊರೆತ ಫಲ || ೨ ||

ಏನಗೈಯಲಾನು | ಮೊದಲೇ |
ಧ್ಯಾನಿಸದೀಗಿನ್ನು ||
ಕಾಣಿಸು ಪಥವನೆ | ತ್ರಾಣಕೆ ಯಾರ್ಹೊಣೆ |
ಸ್ಥಾನ ಸುರಕ್ಷಣೆ | ಗಾನಲು ಯಿದಕೆಣೆ || ೩ || 118 ||

ಭಾಮಿನಿ
ಎಂದು ಯೋಚಿಸಲಿದ ನಿವಾರಣೆ |
ಹೊಂದಿಸುವದೆಂತರಿಯೆನಾದರು |
ಬಂದುದನು ನೀಗಾಡಿಸಲುಬೇಕದಕೆ ನಾವೆಲ್ಲ ||
ಚಂದ್ರಧರನೆಡೆಗೈದಿ ಪ್ರಾರ್ಥಿಸೆ |
ಚಂದವೆನುತ ಮುಕುಂದನವರೊಡ |
ನಂದು ಜೊತೆಗೊಂಡೈದಿದನು ರಜತಾದ್ರಿಯೆಡೆಗತ್ತ || ೧ || 119 ||

ಕಂದ
ರಜತಾದ್ರಿಗೆ ಗಮಿಸುತ್ತಂ |
ಬುಜನೇತ್ರಂ ವಿಧಿ ಬಿಡೌಜ ಮುಖ್ಯರು ಸಹಿತಂ ||
ಭುಜಗಾಭರಣನ ನಾಮವ |
ಭಜಿಸಿದರತಿ ಭಕ್ತಿಭಾವದಿಂ ಪ್ರಾರ್ಥಿಸುತಂ || ೧ || 120 ||

ಶಂಕರಾಭರಣ - ಏಕ
ಪಾಲಿಸು ಪಾರ್ವತಿ | ಲೋಲ ಪರೇಶ | ಕಾಲ ಕಂಧರ ಕಾಲ |
ಕಾಲ ಗಿರೀಶ | ಪಾಲಿಸು ಶಂಕರ | ಖೂಳಭಯಂಕರ |
ಲೀಲಾಮಯ ಕರು | ಣಾಳು ಶುಭಂಕರ | ಕಾಳಗ ಪಟು ಶಿರ |
ಮಾಲ ದಯಾಕರ | ಶೂಲಾಯುಧಧರ | ಪಾಲಾಂಬಕ ಹರ || ಪಾಲಿಸು || ೧ ||

ಖಳ ವಿದಲಾಂಕೋ | ತ್ಪಲರೆಂಬೀರ್ವರು | ಬಲ ಸಹ ಸುರಲೋಕ |
ಬಳಸುತಲವರು | ಬಲುಮೆಯ ಭೀಕರ | ರಳುಕದೆಯಮರರ |
ಗೆಲಿದಟ್ಟುತ ಹೊರ | ಬಲರಿಪು ಮುಖ್ಯರ | ಬಳಲಿಸುತಬ್ಬರ |
ದೊಳಗಿಹರಸುರರ | ನಳಿಸಿಯೆ ದಿವಿಜರ | ಸಲಹು ಮಹೇಶ್ವರ || ಪಾಲಿಸು || ೨ || 122 ||

ಕಂದ
ಹರಿಯಜ ಮುಖ್ಯರು ಪ್ರಾರ್ಥಿಸ |
ಲರಿತಿದಿರ್ದೈದಿ ಕರೆತಂದು ಮನ್ನಿಸುತವರಂ ||
ಪುರಹರ ನಗುತಂ ಬಳಿ ಕು |
ಳ್ಳಿರಿಸುತೆಂದಂ ವಿನೋದದಿಂ ಶ್ರೀಧರಗಂ || ೧ || 123 ||

ಮಾರವಿ - ಏಕ (ಸುರುಟಿ - ಏಕ)
ಏನಿದೇನು ಭಾವ | ನಿನ್ನದಿ |
ದೀ ನವೀನ ಭಾವ ||
ನೀನೆನ್ನನು ಬಲು | ಧ್ಯಾನದಿ ಪೊಗಳಲು |
ನಾನಾರ್ಥಮೊಳು | ಕಾಣದು ಬದಲು || ೧ ||

ವರವನಿತ್ತು ವಿಧಿಯು | ಖಳರಿಗೆ |
ಸುರರಿಗಿಂಥ ವಿಧಿಯು ||
ಬರಲಿವ ಪರಿಹರಿ | ಪರೆ ಸಾಧ್ಯವೆ ಹರಿ |
ಯರಿಯೆಯ ಪುರುಷರಿ | ಗರಿದೆಂಬುದ ಸರಿ || ೨ ||

ಹರಿಯೆ ನಿನ್ನ ತಂಗಿ | ಇಲ್ಲಿಯೆ |
ಇರುವಳಲ್ಲ ತಂಗಿ ||
ದುರುಳ ಖಳರ ತರಿ | ವರೆ ನೀ ಮಾತರಿ |
ತೊರೆದರೆ ಖಾತರಿ | ತರುವಳು ಜಯಸಿರಿ || ೩ || 126 ||

ಕೇದಾರಗೌಳ - ಝಂಪೆ
ಹರಿಯೆಂದನಹುದು ಮೃಡನೆ | ನಾರಿಯಿಂ |
ಮರಣ ಬಹುದವರಿಗೊಡನೆ ||
ದುರುಳರಂ ಕೊಲುವಳಂಬೆ | ದಿಟವು ನಾ |
ಕರೆದೀಗಲವಳೊಳೆಂಬೆ || ೧ ||

ಬಾ ತಂಗಿ ಬಾ ಭವಾನಿ | ದುರ್ಗೆ ಗಿರಿ |
ಜಾತೆ ಶುಭ ಕೀರವಾಣಿ ||
ಭೀತಿಯಿಂದಿಹ ಸುರರನು | ಸಲಹು ವಿ |
ಖ್ಯಾತೆ ಸಚ್ಚರಿತೆ ನೀನು || ೨ ||

ಬಂದಾಗಲಂಬೆ ಭವನ | ಬಳಿ ನಿಂದು |
ಎಂದಳೇನೇನು ಹವಣ ||
ಇಂದಿರೇಶನೆ ಕರೆಯಲು | ಎನಲು ಗೋ |
ವಿಂದನೆಲ್ಲವನೊರೆಯಲು || ೩ ||

ಕೇಳಿ ನಗುತೆಂದಳಭವೆ | ಯೆನ್ನೊಳೀ |
ಲೀಲೆ ನಾಟಕವೆ ವಿಭುವೆ ||
ತಾಳೆನಿದ ನೀವೀರ್ವರು | ಸಾಗದೆನ |
ಲೇಳಿ ಬಲಕಾರಿರ್ವರು || ೪ ||

ತಂಗಿ ನೀನಿರ್ವೆಯೆಂದೆ | ಹೋರ್ವರೀ |
ಸಂಗತಿಯ ನಿನಗೆಯೆಂದೆ ||
ಹಂಗಿಪೆಯ ನಮ್ಮ ಚದುರೆ | ಒಪ್ಪದಿರೆ |
ಸಂಗರಕೆ ಹಿಂದೆ ಚದರೆ || ೫ ||

ಎನ್ನ ಬಾಧೆಗೆ ಬಾರದೆ | ಯಾರಿಗೂ |
ಬನ್ನಗೊಡಲ್ಕೆದೆ ಬರಿದೆ ||
ಕುನ್ನಿಗಳು ಬಂದು ಕೆಣಕೆ | ಕೊಂದವರ |
ಮಣ್ಣು ಮುಕ್ಕಿಸುವ ಕ್ಷಣಕೆ || ೬ ||

ಅಷ್ಟೊಸಗು ಸಾಕು ನೀನು | ಬರಲು ಯಮ |
ಪಟ್ಟಣಕ್ಕಟ್ಟವರನು ||
ಶಿಷ್ಟರೀ ಸುರರೆಲ್ಲರು | ಸ್ವಾತಂತ್ರ್ಯ |
ಪಟ್ಟಲ್ಲಿ ಸುಖಿಗೊಳ್ವರು || ೭ || 133 ||

ಭಾಮಿನಿ
ಎನೆ ಸುಮಂಗಲೆಯಸ್ತು ಕೊಡೆ ಹರಿ |
ಫಣಿವಿಭೂಷಣನೊಪ್ಪಿಗೆಯ ಪಡೆ |
ದನಿಮಿಷೇಶಾದ್ಯರನು ಕಾದಿರಿ ಸಮಯವೆಂದರುಹಿ ||
ವನಜಸಂಭವ ಸಹಿತ ಬೀಳ್ಕೊ |
ಟ್ಟಣಿಯಹುದು ಜಯಗೊಳಲು ದಾರಿಯ |
ದೆಣಿಕೆಯಂತೆಂದಸುರಹರನೈದಿದನು ನಿಜ ಗೃಹಕೆ || ೧ || 134 ||

ಸೌರಾಷ್ಟ್ರ - ತ್ರಿವುಡೆ
ಇತ್ತಲಿಂತಿರೆ ವಿದಲ ಸುರಪುರ |
ದತ್ತ ವೈಭವದಿಂದ ಮೆರೆಯೆ ಸ |
ಮಸ್ತ ಭಾಗ್ಯವನುಣುತ ಸಾಹಸ | ಮತ್ತನಾಗಿ || ೧ ||

ಒಂದು ದಿನ ಖಳನನುಜನುತ್ಪಲ |
ನಂದದಿಂ ಪತ್ತನದ ಹೊರ ಪ್ರತಿ |
ಸಂದುಗೊಂದನ್ನೀಕ್ಷಿಸುತ ಬರೆ | ಮುಂದೆ ಮುಂದೆ || ೨ ||

ಬರ್ಪ ಸಮಯದೊಳೊಂದು ಕಡೆ ಗಂ |
ಧರ್ವಪತಿ ಭದ್ರಾಖ್ಯನಣುಗಿಯ |
ಪೂರ್ವಸುಂದರಿ ಕುಸುಮ ಮಂಜರಿ | ಸರ್ವಭೂಷೆ || ೩ ||

ಗೆಳತಿಯರು ಸಹ ವನದ ಘನಸಿರಿ |
ಚೆಲುವ ನಿರುಕಿಸುತಿರಲು ಬಂದಾ |
ಖಳ ನಿರೀಕ್ಷಿಸಿ ತನ್ನೊಳೇ ಭ್ರಮೆ | ತಳೆಯುತೆಂದ || ೪ || 138 ||

ಯಮುನಕಲ್ಯಾಣಿ - ಏಕ
ಅಹಹ ಯಾರಿವಳು ಸುಂದರಿ ನಾರಿ | ಭಲೆ |
ಯಹಿವೇಣಿ ಕೋಮಲೆ ವೈಯ್ಯಾರಿ || ಪ ||
ಮೊಗವೆತ್ತಲಿವಳು ಚಂದಿರನತ್ತ | ಸೋಲ್ವ |
ನಗೆಯದು ಬೆಳದಿಂಗಳೆನ್ನುತ್ತಾ ||
ಬಗೆವೋಲಹುದು ಕಾಣದು ಕುತ್ತ | ಈ ಸೊ |
ಬಗ ಬಣ್ಣಿಸುವರೆ ನಾ ನಿಶ್ಶಕ್ತಾ || ಅಹಹ || ೧ ||

ಕನ್ನಡಿಯಂತೆ ಶೋಭಿಪ ಕೆನ್ನೆ | ನೋಡೆ |
ಕಣ್ಣುಗಳರವಿಂದಕೆಣೆ ಕನ್ನೆ ||
ಚಿನ್ನದ ಮೈಬಣ್ಣ ಥಳಕನ್ನೆ | ತಪ್ಪ |
ಉನ್ನತ ಸೌಂದರ್ಯ ಸಂಪನ್ನೆ || ೨ ||

ತುಂಬಿಗಳೆನಲು ಶೋಭಿಸುತಿಪ್ಪ | ತಲೆ |
ತುಂಬಿಹ ಕುಂತಳವೆಮಿತೊಪ್ಪ ||
ಬಿಂಬಸಮಾಧರೆಗೆಣೆಯಪ್ಪ | ಸ್ತ್ರೀಯ |
ಕಾಂಬುದೀಗೆಲ್ಲಿಯು ಸರಿಯೊಪ್ಪ || ಅಹಹ || ೩ || 141 ||

ಭಾಮಿನಿ
ವಿಧವಿಧದ ಸ್ತ್ರೀಯರನು ಸೃಷ್ಟಿಸಿ |
ವಿಧಿಯು ಮನಸಂತೃಪ್ತನಾಗದೆ |
ವಿಧಿಸಬೇಕಿನ್ನೊರ್ವಳಂ ನೂತನದೊಳೆನುತೆಣಿಸಿ ||
ಸುಧೆಯ ರಸದಿ ಸುವರ್ಣಮಂ ತೇ |
ದಧಿಕತರ ಕೌಶಲ್ಯದಿಂದೀ |
ಸುದತಿಯಂ ನಿರ್ಮಿಸಿದನೆನೆ ಶೋಭಿಸುವಳೀ ಕಾಂತೆ || ೧ || 142 ||

ಕಂದ
ರಂಭೆ ತಿಲೋತ್ತಮೆ ಮೇನಕೆ |
ಯೆಂಬಪ್ಸರೆಯರ ಪಳಿವೀ ಕಾಮಿನಿಯಂ ||
ಸಂಭ್ರಮದಿಂ ವರಿಸುವೆನೆಂ |
ದಬುಜಮುಖಿಯಂ ನುಡಿಸಿದನುತ್ಪಲ ಖಳನುಂ || ೧ || 143 ||

ಬೇಗಡೆ - ಏಕ
ನಾರಿಮಣಿ ನೀ | ನಾರಿರುವಿ ನಿನ್ನ | ಪೆಸರೇನು ಪೇಳು ವಿ |
ಚಾರಗಳ ವಿ | ಸ್ತಾರದಿಂ ಚಿನ್ನ ||
ನೀರೆ ನವ ಶೃಂಗಾರೆ ಮೋಹ ವಿ |
ಕಾರೆ ರಮ್ಯಾ | ಕಾರೆ ಸುಮಶರ |
ವೇರೆ ಕ್ಷಣ ಪರಿ | ಹಾರೆ ಮಂಜುಳ |
ಹಾರೆ ನಡುನಗೆ | ಬೀರೆ ಶುಭಕರೆ || ೧ ||

ಶೋಣಿತಾಧಿಪ | ಗಾನು ಸಹಜಾತ | ಧುರಧೀರನುತ್ಪಲ |
ಕ್ಷೋಣಿ ಮೂರೊಳು | ತ್ರಾಣಿ ವಿಖ್ಯಾತ ||
ವಾಣಿ ನರವರ | ದಾನವನುವರ |
ದಾನವಾಮರ | ಮಾನವರೊಳಿರ |
ಲೇನು ಭಯ ಬರ | ಹಾನಿ ಪುರುಷರ |
ಶ್ರೇಣಿಯಿಂದಿರ | ದೀ ನುಡಿಯ ತೆರ || ೨ ||

ಚಂದ್ರಮುಖಿ ತವ | ಚಂದಮಂ ನೋಡಿ | ಮನವಿತ್ತೆ ವರಿಸೊಲ |
ವಿಂದಲೇನಲಿ | ವಂದ ತನುನೀಡಿ ||
ಬಂದು ಕೈಪಿಡಿ | ಯಿಂದೆ ಸುಖಪಡಿ |
ಯೊಂದು ಮೃದು ನುಡಿ | ಯೆಂದರಾಯ್ತುಡಿ |
ಯಿಂದ ಮೇಲ್ಮೂಡಿ | ಯಂದ ನಿನ್ನಡಿ |
ಗೆಂದರಿತು ತುಡಿ | ದೊಂದಿಗೇ ನಡಿ || ೩ || 146 ||

ಕಂದ
ನುಡಿ ಕೇಳ್ದಾ ಸುಮ ಮಂಜರಿ |
ಕಡು ಕೋಪವನಾಂತು ಕಣ್ಣೊಳುರಿ ಸೂಸುತ್ತಂ ||
ದೃಢ ಮಾನಸದಿಂ ಬೆದರದೆ |
ದಡಿಗಂಗೆಂದಳು ಕರಾಳೆಯಾಗುತಲಾಗಂ || ೧ || 147 ||

ಭೈರವಿ - ಏಕ
ಛೀ ಮೂರ್ಖನೆ ಸಾರತ್ತ | ನಿ |
ನ್ನೀ ಮಾತೆನ್ನೊಳು ವ್ಯರ್ಥ ||
ಸಾಮಾನ್ಯಳು ನಾನಲ್ಲ | ಬಿಡು |
ಕಾಮುಕತನವನ್ನೆಲ್ಲ || ೧ ||

ಗಂಧರ್ವಾಧಿಪ ಭದ್ರು | ಮಮ |
ತಂದೆ ಪರಾಕ್ರಮ ರುದ್ರು ||
ತಿಂದೇ ಬಿಡುವನು ನಿನ್ನ | ನಡೆ |
ಹಂದೆಯೆ ಬದುಕೈ ಮುನ್ನ || ೨ ||

ನೆನೆಸಲು ನಾನೀ ಕ್ಷಣದಿ | ಬಂ |
ದನುವಪ್ಪನು ನಿಲೆ ರಣದಿ ||
ನಿನಗವಸಾನವು ಸಿದ್ಧ | ಅವ |
ನೆಣಿಸಿದ ರೂಪ ಪ್ರಸಿದ್ಧ || ೩ || 150 ||

ಕೇದಾರಗೌಳ - ಝಂಪೆ
ಸಾಕು ಸಾಕಬಲೆ ಬರಿದೆ | ಇಂಥ ಮಾ |
ತೇಕೆನ್ನ ಬಳಿ ಬಾರದೆ ||
ನೂಕುವೆಯ ಬಂದ ಭಾಗ್ಯ | ನಾ ಖ್ಯಾತ |
ನಾಕವನೆ ಪಡೆದ ಯೋಗ್ಯ || ೧ ||

ಯೋಗ್ಯನಾಗಿರಲು ನೀನು | ನಡೆ ಹಿಂದೆ |
ಶ್ಲಾಘ್ಯವದು ನಿನಗೆನ್ನನು ||
ಭಾಗ್ಯವುಣಲಿಲ್ಲೆ ಬಿಡಲು | ಒಡನೆಯಾ |
ರೋಗ್ಯಕರವಪ್ಪುದೊಡಲು || ೨ ||

ಭದ್ರೆ ಕೇಳ್ನಿನ್ನ ಪಿತನು | ಗಂಧರ್ವ |
ಭದ್ರನೆಂದೆನಿಪಾತನು ||
ಯುದ್ಧಕೈದಿದರೆ ಹೊಡೆದು | ನಿನ್ನ ನಾ |
ನೊಯ್ವೆನು ಕೈಯ ಪಿಡಿದು || ೩ ||

ಪಂಥವೇತಕೆ ಭ್ರಷ್ಟನೆ | ನಿನ್ನವರಿ |
ಪಂಥವಳದಲ್ಲೆಷ್ಟನೆ ||
ಹಿಂತೆಗೆದರೊಳಿತು ಮನವ | ಮುಂದರಿಯ |
ಲಂತಕನೆ ನಿನಗೆ ಮುನಿವ || ೪ || 154 ||

ಭಾಮಿನಿ
ದುಷ್ಟನಾಕ್ಷಣ ಬಿಡೆನು ಬಿಡೆನೆಂ |
ದಟ್ಟಹಾಸದೊಳೇಳಲಬಲೆಯು |
ಕೆಟ್ಟೆನಯ್ಯೋ ಕೆಡುಕನಿವನೇ ಗೈವನೋ ಯೆನುತ ||
ಘಟ್ಟನೆನ್ನಪ್ಪಯ್ಯ ಬಾಬಾ |
ಭ್ರಷ್ಟನಂ ಸಂಹರಿಸಿ ಯಮನೆಡೆ |
ಗಟ್ಟಿ ಸುತೆಯಂ ಪಾಲಿಸೆನುತಲಿ ಮನದಿ ಸ್ಮರಿಸಿದಳು || ೧ || 155 ||

ಸೌರಾಷ್ಟ್ರ - ತ್ರಿವುಡೆ
ಅತ್ತ ಗಂಧರ್ವೇಶ ಭದ್ರಗೆ |
ಪುತ್ರಿಯಳಲರಿವಾಗೆ ಪ್ರಳಯದ |
ಮೃತ್ಯುವೆನೆ ಗರ್ಜಿಸುತ ಯಾರವ | ಧೂರ್ತ ಖಳನು || ೧ ||

ಮೂರು ಲೋಕವ ಮುತ್ತಬಲ್ಲವ |
ವೀರರಣ ಸಂಹಾರ ಭೈರವ |
ಧೀರನೀ ಗಂಧರ್ವಪತಿಗವ | ನಾರು ಮುನಿವ || ೨ ||

ಭದ್ರನಣುಗಿಯ ಕೆಣಕಲಾ ಹರಿ |
ರುದ್ರರೇ ಬರಲೆನಲಿಕಾರಿವ |
ಕ್ಷುದ್ರ ದಾನವನವನನೀ ಕ್ಷಣ | ಛಿದ್ರಗೈವೆ || ೩ ||

ಎಂದು ಭದ್ರಮನೋಸುವೇಗದಿ |
ಬಂದು ಸುತೆಗಭಯವನು ಪಾಲಿಸಿ |
ನಿಂದಿದಿರು ಗರ್ಜಿಸುತ ದೈತ್ಯ ಮ | ದಾಂಧಗೊರೆದ || ೪ || 159 ||

ಭೈರವಿ - ಏಕ
ಯಾರೆಲವೋ ಖಳ ನೀನು | ಸುಕು |
ಮಾರಿಯ ಬಾಧಿಸುವವನು ||
ಹೀರುವೆ ನಿನ್ನಯ ಹರಣ | ಬರೆ |
ಹೋರಲು ಗಣಿಸೆನು ಹರನು || ೧ ||

ಹರನೇತಕೆ ನಿನಗಾನು | ದೈ |
ತ್ಯರ ಪತಿ ವಿದಲಾನುಜನು ||
ಸುರಪುರವನು ಗೆದ್ದಿಲ್ಲಿ | ಈ |
ಗಿರುವೆನು ಬಲಭದ್ರದಲಿ || ೨ ||

ಭದ್ರುದ ಬಲವನ್ನರಿವ | ಈ |
ಭದ್ರುನ ನೀನೇನರಿವೆ ||
ಭದ್ರೆಯಿವಳ ಕೆಣಕಿದೆಯ | ನಿಲು |
ಛಿದ್ರಿಸುವೆನು ಕ್ಷಣಕೆದೆಯ || ೩ ||

ಎನೆ ರೋಷದೊಳುತ್ಪಲನು | ಬಿಡೆ |
ಘನತರದುರಿ ಶರಗಳನು ||
ಕ್ಷಣದೊಳದನು ತರಿದಿಟ್ಟ | ಭ |
ದ್ರುನು ಗಣಿಪನೆ ಕಲಿ ದಿಟ್ಟ || ೪ || 163 ||

ಭಾಮಿನಿ
ಕಾದಿದರು ಬಲು ವಿಧದಿ ಬಳಿಕ ವಿ |
ರೋಧದಿಂದೀರುವರು ವರದ ಪ್ರ |
ಸಾದದಿಂದಾ ಖಳನ ಶಕ್ತಿಯು ವರ್ಧಿಸುತ್ತಿರಲು ||.
ಸಾಧಿಸದು ಗೆಲುವೆಂದು ತಿಳಿದು ಪ್ರ |
ಮಾದಕೆಡೆಗೊಡದೊಡನೆ ಭದ್ರುನು |
ಶೋಧಿಸಿದ ಮಾಯೆಯಲಿ ಸುತೆಸಹಿತೈದಿದನು ಗೃಹಕೆ || ೧ || 164 ||.

ಕಂದ
ಸಖಿಯರು ಸಹಿತಂ ಖಳ ಸ |
ಮ್ಮುಖದಿಂ ತೊಲಗಲ್ಕೆಯಚ್ಚರಿಯದಿಂದವನುಂ ||
ಯುಕುತಿಯೊಳೈದಿದರೆಂದದ |
ಪ್ರಕಟಿಸದಾಸ್ಥಾನಕಂ ಗಮಿಸಿದಂ ಭರದಿಂ || ೧ || 165 ||

ಭೈರವಿ - ಝಂಪೆ
ಆಸ್ಥಾನದೊಳು ವಿದಲ | ನುತ್ಸಾಹದಿಂ ಲ |
ತ್ಯಾಪ್ತ ಸಚಿವೇಶ ದಳ | ಮೊತ್ತ ಪತಿ ಪ್ರಬಲ || ೧ ||

ಪ್ರಮುಖರೊಡನೆಸೆದಿರಲು | ಸಮಯಕುತ್ಪಲ ಬರಲು |
ಕ್ರಮದಂತೆ ಮುಖ್ಯರೊಳು | ಗಮನಿಪನಿತರೊಳು || ೨ ||

ಹರನಾಮ ಕೀರ್ತಿಸುತ | ಸರಸಿಜೋದ್ಭವನ ಸುತ |
ಬರಲೆದ್ದು ಖಳನಾಥ | ನೆರಗಿ ಮನ್ನಿಸುತ || ೩ ||

ನಾರದನೆ ನೀ ಬಂದ | ಕಾರಿಯವ ಭರದಿಂದ |
ಸಾರೆನಲು ಮುನಿಯೆಂದ | ನೀ ರೀತಿಯಿಂದ || ೪ || 169 ||

ಮಧುಮಾಧವಿ - ಏಕ
ಧಣುರೆ ಮೆಚ್ಚಿದೆನಯ್ಯ | ದನುಜ ಕುಲಾರ್ಯ |
ಧನಕನಕೈಶ್ವರ್ಯ | ಕೆಣೆ ಪೇಳಲರ್ಯ || ಪ ||
ಮೂರು ಲೋಕದೊಳಿಂಥ | ಧೀರರಾರಿಲ್ಲ |
ಧಾರುಣಿಯೊಳಗಿಂತು | ಸಾರುವರೆಲ್ಲ |
ಈ ರೀತಿ ಸುರಪೀಠ | ವೇರಿದ ಮಲ್ಲ |
ಬೇರಾವನಮರರು | ಜಾರಿದರಲ್ಲ || ಧಣುರೆ || ೧ ||

ಸಾಮಾನ್ಯನೇ ನೀನು | ಸಾಮರ್ಥ್ಯದಲ್ಲಿ |
ಕಾಮಾರಿ ಹರಿ ಬ್ರಹ್ಮ | ರೇ ಮುನಿದಿಲ್ಲಿ |
ಕೈಮಾಡದಿರ್ಪರು | ಕ್ಷೇಮದಿಂದಲ್ಲಿ |
ನಾಮವೆತ್ತಲಿಕಂಥ | ಭೀಮರಿಂದೆಲ್ಲಿ || ಧಣುರೆ || ೨ ||

ಇಂತಿದ್ದರೂ ನೀ | ಸ್ವಂತ ವಿಚಾರ |
ಚಿಂತಿಸುತೆಲ್ಲವೆಂ | ಬಂಥ ಪ್ರಚಾರ |
ಬಂತೆನ್ನ ಕಿವಿಗದ | ರಂತರ ಸಾರ |
ಆಂತಿಹೆನಾಯ್ತು ತ | ನ್ನಂತೆ ಪ್ರಸಾರ || ಧಣುರೆ || ೩ ||

ಪರಮೇಶನರಸಿಯಾ | ಪರಮೇಶ್ವರಿಯನು |
ಅರಿಯೆಯ ಕಾಯ | ಸೌಂದರಿಯ ದುರ್ಗೆಯನು |
ಧುರವೆನಲಂಜದೆ | ಮೆರೆವಂಬಿಕೆಯನು |
ಸುರರನು ಪೊರೆಯುವ | ಗಿರಿಜಾ ದೇವಿಯನು || ಧಣುರೆ || ೪ ||

ಅಂಬಿಕೆ ಕೊಂದಳು | ಶುಂಭಾದಿಗಳನು |
ಎಂಬಾಗ ನೀ ಶೌರ್ಯ | ತುಂಬಿದಗ್ಗಳನು |
ಎಂಬುದೆ ಸುಮ್ಮನೆ | ಯಂಬುಧಿ ಬಲನು |
ಗಂಭೀರ ವಿಷಯಾ | ರಂಭ ನಿಚ್ಚಳನು || ಧಣುರೆ || ೫ ||

ನಿನ್ನ ವಂಶದ ಮಾನ | ವನ್ನು ನೀನುಳಿಸು |
ಉನ್ನತಿಗೆಯ ಕಪ್ಪು | ಬಣ್ಣವನಳಿಸು |
ಧನ್ಯನಾಗಲು ಜಯ | ಕನ್ಯೆಯನೊಲಿಸು |
ನಿರ್ಣಯ ಸತ್ಕೀರ್ತಿ | ಮನ್ನೆಯನೆನಿಸು || ಧಣುರೆ || ೬ || 175 ||

ಭಾಮಿನಿ
ಅಂಬಿಕೆಯು ತ್ರೈಲೋಕ ಮೋಹಿನಿ |
ಸಂಭವಿಸೆ ಜಯ ನಿನ್ನ ಭಾಗ್ಯವು |
ತುಂಬಿದಂತೆಯೆ ತಿಳಿಯಿತೇ ನೀ ಸಾಧಿಸಿದನೊಡನೆ ||
ಎಂಬುದನು ನಾನೆಂದೆನ್ನೈದುವೆ |
ನಿಂಬರೆಡೆಯಿಲ್ಲೆನುತ ನಾರದ |
ಶಂಭು ಶಂಕರಯೆಂದು ನುತಿಸುತ ಸಾರ್ದ ಸಂತಸದಿ || ೧ || 176 ||

ಕಂದ
ಹರಿ ಮನದಿಷ್ಟವ ಗೈದಿಹ |
ಹರುಷದಿ ನಾರದ ಮುನೀಂದ್ರನೈದಲ್ ವಿದಲಂ ||
ಕೆರಳುತ ಶುಂಭಾಖ್ಯರನಾ |
ತರುಣಿಯು ಕೊಂದಳೆಯೆನುತ್ತ ಸಭೆಯೊಳಗೆಂದಂ || ೧ || 177 ||

ಸೌರಾಷ್ಟ್ರ - ತ್ರಿವುಡೆ
ಅನುಜ ಸಚಿವಾದಿಗಳು ಕೇಳ್ವರೆ |
ಮುನಿಪನೆಂದುದ ಶುಂಭಮುಖ್ಯರ |
ವನಿತೆಯಂಬಿಕೆ ಕೊಂದಳೆಂಬುದ | ನೆಣಿಸಿ ನೋಡಿ || ೧ ||

ಕೊರತೆಯಲ್ಲವೆ ನಮಗೆ ಮಘವಾ |
ದ್ಯರನು ಸೋಲಿಸಿ ಫಲವದೇನಿದೆ |
ತರುಣಿಯನು ಪಿಡಿದೆಳೆದು ತಪ್ಪುದೆ | ಸರಿಯ ಶಾಸ್ತಿ || ೨ ||

ಸಾರಿ ರಜತಾದ್ರಿಯನು ಮುತ್ತುತ |
ನಾರಿಯನು ತರಲೈದುವೆನುಯೆನೆ |
ಆರುಭಟೆಯಿಂದೆಂದನುತ್ಪಲ | ಹಾರಿ ಮದದಿ || ೩ ||

ಅಣ್ಣ ನೀನಿದಕೇತಕೈದುವೆ |
ಹೆಣ್ಣ ಹಿಡಿದೆಳತರುವದೇತರ |
ಗಣ್ಯವದು ತಂದೊಪ್ಪಿಸುವೆ ನಾ | ನಿನ್ನ ಪದಕೆ || ೪ ||

ಸುಬಲನುಸುರಿದನಾಗ ನಾನಿಹೆ |
ಪ್ರಭುಗಳೇತಕೆ ಹೊರಡುವುದು ನೀ |
ವುಭಯರಿಲ್ಲಿರಿ ತರುವೆನೀಕ್ಷಣ | ಕಬಲೆಯಳನು || ೫ ||

ಎಂದ ಸೇನಾಪತಿ ಪ್ರಬಲನಿ |
ದೊಂದು ಕಾರ್ಯಕೆ ನೀವದೇತಕೆ |
ತಂದು ಪದಕರ್ಪಿಪೆನು ನಾನೇ | ಸುಂದರಿಯನು || ೬ || 183 ||

ಭಾಮಿನಿ
ಕೇಳುತೆಲ್ಲವ ವಿದಲ ಸಾಹಸ |
ಶಾಲಿಗಳು ನೀವಹುದು ಖರೆ ನಾ |
ನೇಳುವೆನು ಜೊತೆ ಬನ್ನಿರೆಂದುಸುರುತಲಿ ಬಳಿಕವನು ||
ಕಾಳಗದ ಸಿದ್ಧತೆಯೊಳಾಕ್ಷಣ |
ಪಾಳೆಯವನೊಡಗೊಂಡು ಸಾರುತ |
ದಾಳಿಯಿಟ್ಟನು ಬಪ್ಪುದರಿಯದೆ ರಜತ ಪರ್ವತಕೆ || ೧ || 184 ||

ಕಂದ
ಎಲ್ಲಿಹಳಂಬಿಕೆ ಬರಲೆಂ |
ದಲ್ಲಿಯ ಕಾವಲಗಣಗಳೊಳರುಹಲ್ಕಾಗಂ ||
ನಿಲ್ಲಿರಿ ಸುಮ್ಮನೆಯೆನುತವ |
ರಲ್ಲೋರ್ವ ಸಾರ್ದು ಪೇಳ್ದ ಹರಗೆರಗುತ್ತಂ || ೧ || 185 ||

ಮುಖಾರಿ - ಏಕ
ಲಾಲಿಸು ದೇವರ ದೇವ ಗಿರೀಶ | ಪನ್ನಗ ಭೂಷ |
ಲಾಲಿಸು ದೇವರ ದೇವ ಗಿರೀಶ ||
ಲಾಲಿಸು ಶಶಿಧರ | ಕಾಲ ಸುಕಂಧರ |
ಖೂಳಭಯಂಕರ | ಲೀಲಾ ಶಂಕರ || ಲಾಲಿಸು || ೧ ||

ವಿದಲೋತ್ಪಲರೆಂಬ | ದುಷ್ಟ ಸೋದರರು | ದನುಜೇಶ್ವರರು |
ಮದಮುಖ ದೈತ್ಯರ ಕೂಡಿ ಬಂದಿಹರು ||
ವಿಧ ವಿಧ ದರ್ಪವ | ನೊದರುತಲಿರ್ಪವ |
ರದುಭುತರಲ್ಪರ | ಅಧಟಿಗೆ ಮುಪ್ಪಿರ || ಲಾಲಿಸು || ೨ ||

ಅಂಬಿಕೆ ಎಲ್ಲಿಹಳೀಕ್ಷಣ ಬರಲಿ | ದರ್ಪ ಬಿಟ್ಟಿರಲಿ |
ಸಾಂಬನಿಗನ್ನಿ ಜಾಗ್ರತೆ ಕರತರಲಿ ||
ಎಂಬರು ಹುಲು ಖಳ | ರುಂಬರದರ ಫಲ |
ಹುಂಬರದೇನ್ಫಲ | ಶಂಭೋ ಮಾಬಲ || ಲಾಲಿಸು || ೩ || 188 ||

ಭಾಮಿನಿ
ಗಣ ಭಯದೊಳಿಂತೆನಲು ಕೇಳುತ |
ಗಣಿಸಿ ಮನದಲಿ ಮುಂದಕಪ್ಪುದ |
ಗಣಪನವ್ವೆಯ ಕೆಣಕಲೈದಿದ ಖಳರಿಗವಸಾನ ||
ಸನಿಹವಾಯ್ತೆಂದರಿತು ನಗುತಲಿ |
ಫಣಿವಿಭೂಷಣ ಕರೆಯುತಾಕ್ಷಣ |
ಅನಿಮಿಷಾರ್ಚಿತೆ ಭಯ ವಿಸರ್ಜಿತೆಯಗಜೆಗೊಡನೆಂದ || ೧ || 189 ||

ಬೇಗಡೆ – ಝಂಪೆ (ಭೈರವಿ - ಝಂಪೆ)
ಬಾರೆ ಬಾರೆ ಭವಾನಿ | ಬಾರೆ ಮಂಜುಳವಾಣಿ |
ಬಾರೆ ಪನ್ನಗವೇಣಿ | ಬಾರೆ ಗಿರಿಜಾತೆ ನೀ || ೧ ||

ವಿದಲೋತ್ಪಲರು ಕರೆವ | ರದೊ ಗಿರಿಯ ಮುತ್ತಿರುವ |
ರದುಭುತರು ನಮಗೊರೆವ | ಡಫಟಿನೇನ್ನರುವ || ೨ ||

ಏನ ಮಾಡುವುದೀಗ | ದಾನವರು ಕರೆದಾಗ |
ಲಾನು ಗಮನಿಸುವುದಾಗ | ದೇ ನುಡಿಯೆ ಬೇಗ || ೩ || 192 ||

ಕಂದ
ಹರನೀ ತೆರದಿಂ ನಗುತಲಿ |
ಸರಸದೊಳಾಡಲು ಭವಾನಿ ಕೇಳ್ದದನೆಲ್ಲಂ ||
ದುರುಳರು ಗಿರಿಯಂ ಮುತ್ತುತ |
ಕರೆದಿರಲೆನ್ನಂ ವಿನೋದವೇಯೆನುತೆಂದಳ್ || ೧ || 193 ||

ಭೈರವಿ - ಏಕ
ಸರಸವೆಯೆನ್ನೊಳು ಕಾಂತ | ಈ |
ಗಿರುವೆವೆ ನಾವೇಕಾಂತ ||
ಕರೆಯಲು ಖಳರತಿ ಮದದಿ | ಇಂ |
ತೊರೆವುದು ಸರಿಯೇ ಮುದದಿ || ೧ ||

ಬಲ್ಲೆನು ನಾನಿದನೆಲ್ಲ | ಆ |
ಖುಲ್ಲರ ತರಿವೆಯ ನಲ್ಲ ||
ಸಲ್ಲದು ನಿನಗೆನ್ನಿಂದ | ಕೊಲಿ |
ಪುಲ್ಲಾಸಕ್ಕಾನಂದ || ೨ ||

ಕೆಣಕಿದ ಮೇಲಿನ್ನವರ | ನಾ |
ಕ್ಷಣವುಳುಹುವೆನೇ ಬವರ ||
ಎನಗೇನ್ನಣ್ಯವೆ ನೀಡು | ಅ |
ಪ್ಪಣೆಯಂ ಕಾರ್ಯವ ನೋಡು || ೩ || 196 ||

ಭಾಮಿನಿ
ಅಂಬಿಕೆಯ ನುಡಿ ಕೇಳುತಾಗ ತ್ರಿ |
ಯಂಬಕನು ಸರಿ ಸಾಗು ನೀನು ವಿ |
ಳಂಬಿಸದೆ ಜೊತೆಗಿರಲಿ ಗಣಗಣವೆನಲಿಕಹುದೆಂದು ||
ಶುಂಭ ಮರ್ದಿನಿ ಮಗನೆ ಬಾ ಹೇ |
ರಂಬ ಬಾ ಗುಹ ಕಾಲಭೈರವ |
ರುಂ ಬರಲಿ ಬಾ ವೀರಭದ್ರ ಸಮುದ್ರ ಬಲಭದ್ರ || ೧ || 197 ||

ಕಂದ
ಎಂದಗಜಾತೆಯು ಕರೆಯಲ್ |
ಬಂದವರೆರಗುತ ವಿಚಾರಮಂ ತಿಳಿದೆಲ್ಲಂ ||
ನಿಂದಬ್ಬರಿಸುತ ಮೂಷಿಕ |
ಸ್ಯಂದನನೆಂದಂ ಭವಾನಿಗಂ ಶೌರ್ಯದೊಳಂ || ೧ || 198 ||

ಮಾರವಿ - ಏಕ
ಮಾತೆಯೆ ಹುಲು ಖಳ | ವ್ರಾತವ ನೀ ಕೊಲ |
ಲೇತಕೆ ಸಾಗುವುದು ||
ಪಾತಕಿಗಳ ಗಳ | ಘಾತಿಸಿ ಜಯಗೊಳ |
ಲಾತುರವೆನಗಹುದು || ೧ ||

ಅಲ್ಪರವರ ರಣ | ಬಲ್ಸುಳಿಯುದು ಕ್ಷಣ |
ಕಪ್ಪಳಿಸುವೆ ಧುರದಿ ||
ಅಪ್ಪಣೆ ಕೊಟ್ಟೈನ | ಗೊಪ್ಪಿಸಿದನು ಮನ |
ತೃಪ್ತಿಗೊಳಿಪೆ ಭರದಿ || ೨ ||

ಸ್ಯಂದನನೊರೆದ ನಾ | ಮುಂದಿಹೆ ಸೇನಾ |
ವೃಂದವೆ ಬೇಡೆನಗೆ ||
ಬಂದ ಖಳರ ಕ್ಷಣ | ಕೊಂದು ಬರುವೆ ರಣ |
ವಿಂದೇತಕೆ ನಿನಗೆ || ೩ ||

ತರಳನ ಸಾಹಸ | ವರಿಯೆಯ ನೀ ಹೊಸ |
ತರವೇನೀ ಕಾರ್ಯ ||
ಮೆರೆಸುವೆ ಪೌರುಷ | ತರುವೆನು ಜಯಯಶ |
ಕರುಣಿಪುದಪ್ಪಣೆಯ || ೪ ||

ಆ ಕ್ಷಣಕುಸುರಿದ | ದಕ್ಷಾರಿಯು ಮದ |
ದಾ ಕ್ಷುಲ್ಲಕರೇನು ||
ಲಕ್ಷ್ಯವೆ ತರಿದಾ | ನೀಕ್ಷಿಪೆ ಜಯವದ |
ದಕ್ಷತೆ ಕಾಣಿಪೆನು || ೫ ||

ನುಡಿದನು ಭೈರವ | ಕೊಡಲಪ್ಪಣೆ ರವ |
ವಡಗಿಸುತೀ ಕ್ಷಣದಿ ||
ಕೆಡಹಿ ಖಳೌಘವ | ಪಡೆವೆನು ವಿಜಯವ |
ದೃಢ ನಾನೀ ರಣದಿ || ೬ || 204 ||

ಭಾಮಿನಿ
ನುಡಿಯ ಕೇಳ್ದಂಬಿಕೆಯು ನೀವೆ |
ನ್ನೊಡನೆ ಬಂದಲ್ಲಿರ್ಪ ರಾಕ್ಷಸ |
ಪಡೆಯನಳಿಸಿರಿ ಕೊಲುವೆ ವಿದಲೋತ್ಪಲರ ನಾನೆನುತ ||
ಪಡೆದು ಹರನಾಜ್ಞೆಯನು ಗಮಿಸಲು |
ಘುಡುಘುಡಿಸಿ ಗಣರೈದಿ ಖಳ ಬಲ |
ಕೆಡಹೆ ಸುಬಲಂ ತಡೆಯೆ ಭೈರವನೆಂದನಿದಿರಾಗಿ || ೧ || 205 ||

ಭೈರವಿ - ಏಕ
ನೀನಾರೆಲ ಖಳ ಧೂರ್ತ | ಹುಲು |
ದಾನವ ಪಡೆ ಬಂದಿತ್ತ ||
ಹಾನಿಯನೆಸಗುವುದೇಕೆ | ಇ |
ನ್ನ್ಯಾನಾಸ್ಪದ ಕೊಡೆನಿದಕೆ || ೧ ||

ಶೋಣಿತಪುರಪತಿ ವಿದಲ | ಅವ |
ಗಾನು ಪ್ರಧಾನಿಯು ಸುಬಲ ||
ಆಣತಿ ದೊರೆಯದ್ದೆನಗೆ | ಜೊತೆ |
ಸೇನೆಯು ಕಾರ್ಯಾರ್ಪಣೆಗೆ || ೨ ||

ಅಂತಹ ಕಾರ್ಯವದೊಂದು | ನುಡಿ |
ದಂತಾಗದು ನಲಿದಿಂದು ||
ಬಂತಂತ್ಯವು ನಿಮಗೆಲ್ಲ | ಇದಿ |
ರಾಂತರೆ ನಿಲಿಸುವೆ ಗುಲ್ಲ || ೩ ||

ಎನೆ ಕೋಪದೊಳಾ ಖಳನು | ಬಿಡೆ |
ಕಣೆಯೊಂದನು ಭೈರವನು ||
ಕ್ಷಣದೊಳದನು ಕಡಿದೆಸೆದ | ಆ |
ದನುಜನುರಿದು ಪಲ್ಕಸೆದ || ೪ ||

ಸುರಿಸಲು ಶರಮಳೆ ಸುಬಲ | ಪರಿ |
ಹರಿಸಿದ ಭೈರವ ಪ್ರಬಲ ||
ಹರನ ಸ್ಮರಿಸುತೊದೆದೊಡೆದು | ಆ |
ದುರುಳನ ಕೆಡಹಿದ ಸದೆದು || ೫ || 210 ||

ವಚನ
ಸುಬಲನಳಿವಂ ಕಂಡು ಪ್ರಬಲಂ ಮುಂದೈತರಲ್ ವೀರಭದ್ರನಡ್ಡೈಸಿ-

ಸೌರಾಷ್ಟ್ರ - ತ್ರಿವುಡೆ
ನಿಲ್ಲು ನಿಲ್ಲು ಖಳಾಧಮನೆ ನೀ |
ನೆಲ್ಲಿಗೈದುವೆ ನಿನ್ನ ನೀ ಕ್ಷಣ |
ಕೊಲ್ಲುವೆನು ನಾ ವೀರಭದ್ರನು | ಮಲ್ಲನಿಹೆನು || ೧ ||

ವೀರಭದ್ರನೆನುತ್ತ ನೀನೇ |
ಕಾರುಭಟಿಸುವೆ ವೈರಿಕುಲ ಸಂ |
ಹಾರ ಭೈರವ ನಾನು ದಳಪತಿ | ಧೀರ ಪ್ರಬಲ || ೨ ||

ಪ್ರಬಲ ದಳಪತಿಯಾದರೇನೀ |
ಪ್ರಭು ಮಹೇಶನ ಭಕ್ತನಿದಿರಲಿ |
ಪ್ರಬಲನಲ್ಲವು ಮಿನ್ನುಳವು ರವಿ | ಪ್ರಭೆಗೆ ಸಮವೇ || ೩ ||

ಸುರನರೋರಗರೆನ್ನ ಕೆಣಕಲು |
ಶಿರವನೆತ್ತರೆನಲ್ಕೆ ನೀನಿದ |
ನರಿಯದೇತಕೆ ಬರಿದೆ ಬಳಲುವಿ | ಮರಳು ಹಿಂದೆ || ೪ ||

ನಾಗಕಂಜುತ ಸಿಂಹ ಸರಿಗೇ |
ನಾಗವನ್ನಿದಿರಿಸಲು ಭಯವೇ |
ನಾಗರುಡಗದರಂತೆ ನಿನ್ನನು | ನಾ ಗಣಿಸೆನು || ೫ ||

ಎನಲು ಕ್ರೋಧದೊಳಾಗ ಪ್ರಬಲನು |
ಕಣೆಯನೊಂದನು ಬಿಡಲು ಗಣಿಸದೆ |
ಕ್ಷಣದಿ ಕಡಿದನು ವೀರಭದ್ರನು | ಕನಲುತದನು || ೬ || 216 ||

ವಚನ
ವೀರಭದ್ರನಿಂತು ರಕ್ಕಸಪಡೆಯಂ ಸಂಹರಿಸುತಿರಲ್ಕೆ ಉತ್ಪಲಂ ತಾನೆ ಸಮರಕ್ಕಣಿಯಾಗಲ್ ಷಣ್ಮುಖನಿದಿರ್ವಂದು-

ಮಾರವಿ - ಏಕ
ದುರುಳನೆ ನಿಲು ನಿಲು | ಸರಿಯಲು ಬೆನ್ನೊಲು |
ಮುರಿವೆನು ನೀನಾರು ||
ಧುರಕಿದಿರಿಸಿ ಹುಲು | ಶರಧನು ತಿರುಹಲು |
ಸುರಿಸುವೆ ಕೆನ್ನೀರು || ೧ ||

ನಾನುತ್ಪಲ ವಿದ | ಲಾನುಜ ಕೋವಿದ |
ಹೂಣಿಗನಿಹೆ ಜತನ ||
ನೀನಾರೀ ವಿಧ | ಪ್ರಾಣವನೀವುದ |
ಕಾನದೆ ಕರೆ ಪಿತನ || ೨ ||

ಮಾರಾಂತಕನ ಕು | ಮಾರನು ನಾನು ಕು |
ಮಾರನು ತಿಳಿಗಿಳೆಯೆ ||
ಮಾರಕ ದನುಜ ಕು | ಲಾರಿಯು ದಿವಿಜ ಕು |
ತಾರನೆ ನೀನುಳಿಯೆ || ೩ ||

ಧುರದೊಳು ಸುರಪಡೆ | ಗಿರಿಯುತ ಪುರಪಡೆ |
ದಿರುವ ಸಹಸಿಯಿಹೆನು ||
ತರಳನೆ ನಿಲೆ ಪೊಡೆ | ದುರುಳಿಸಿ ಜೈಪಡೆ |
ಧುರದಿ ಬಲುಮೆ ತಹೆನು || ೪ ||

ಹರಿಯ ಮರಿಯು ಕಿರಿ | ದಿರಲೇನ್ಮದಕರಿ |
ಬರೆ ತರಿಗದನೊಡನೆ ||
ಶರಬಿಲು ಸಾಕಿರಿ | ವರೆ ನೀ ಮನಕರಿ |
ತೊರೆವುದು ಎನ್ನೊಡನೆ || ೫ ||

ಹುಡುಗನೆ ಮದಶಿರ | ಕಡರಿತೆ ಬಿಲುಶರ |
ತೊಡಲರಿಗೇ ನಿನಗೆ ||
ನುಡಿಯದಿರೀ ತೆರ | ಬಿಡು ಧುರದಾತುರ |
ನಡೆ ಹಿಂದಕೆ ಮನೆಗೆ || ೬ ||

ಮದನಾರಿಯ ಗಿರಿ | ಯಿದು ನೀ ಪಲ್ಗಿರಿ |
ವುದು ವ್ಯರ್ಥವು ಮರುಳೆ ||
ಮದಮುಖ ನಿನಗರಿ | ಯದು ನಿಲು ಶರಗುರಿ |
ಯಿದಿರಿಸಿ ನೀ ಮರಳೆ || ೭ || 223 ||

ಭಾಮಿನಿ
ಖಳನು ಬಳಿಕೆಸೆಯಲ್ಕೆ ಹಲ ವಿಧ |
ದಲಗುಗಳ ಖಂಡಿಸಲು ಷಣ್ಮುಖ |
ನಲಸದಾರ್ಭಟಿಸುತ್ತ ದಾನವನೆತ್ತುತಿರೆ ಶರವ ||
ತಿಳಿದು ಬ್ರಹ್ಮನ ವರದ ಬಲ್ಮೆಯ |
ಬಳಲಲೇತಕೆ ಬರಿದೆನುತ ಗುಹ |
ತೊಲಗೆ ಗಜಮುಖ ಗಜರಿ ದೈತ್ಯನ ತಡೆಯುತಿಂತೆಂದ || ೧ || 224 ||

ಭೈರವಿ - ಝಂಪೆ
ದುಷ್ಟ ದಾನವನೆ ಫಡ | ದಿಟ್ಟತನ ಬೇಡ ಪೊಡ |
ಮಟ್ಟು ನಡೆ ನಿಲಲು ಪೊಡ | ಗಟ್ಟಲಾನ್ ಪ್ರೌಢ || ೧ ||

ನಡೆಯೆ ನಾ ನೀ ತೆರಳಿ | ಯೊಡನೆ ಕಳುಹೈತರಲಿ |
ಮೃಡ ಗಿರಿಜೆ ಸಹಿತಿರಲಿ | ತಡೆಯದೇ ಬರಲಿ || ೨ ||

ಮೃಡ ಗಿರಿಜೆಯರ ಸುದ್ದಿ | ನುಡಿಯಲೇನೆಣಿಸಿದ್ದಿ |
ಬಿಡದಿರಲು ದುರ್ಬುದ್ಧಿ | ಕೆಡಹುವೆನು ಗುದ್ದಿ || ೩ ||

ಕೆಡಹೆ ನಿನಗಸದಳವು | ಹುಡುಗ ನೀನೆಂದೊಲವು |
ನಡೆ ವಿಧಿಯ ವರಬಲವು | ಕೊಡುಗೆನಗೆ ಗೆಲವು || ೪ ||

ಕರಿವದನ ನಾ ವಿಘ್ನ | ತರೆ ವಿಧಿಯ ವರ ಭಗ್ನ |
ವರಿಯೆಯಾ ನೀನೆನ್ನ | ತರಿಯುವೆನು ನಿನ್ನ || ೫ ||

ಗಣಪನೆಂದರಿವೆ ನಾ | ಗಣಿಸೆನಾದರು ನಿನ್ನ |
ಘನ ವರಕ್ಕೆಡರೆಣ್ಣ | ಉಣುವಿ ನೀ ಬನ್ನ || ೬ || 230 ||

ಭಾಮಿನಿ
ಚಿತ್ತವಿಸಿ ಮುನಿವರರು ಬಳಿಕಾ |
ದೈತ್ಯನೊಳು ಬಹು ವಿಧದಿ ಸೆಣಸಿ ಸ |
ಮರ್ಥನಿವ ವರಬಲದೊಳೆನ್ನಿಂದಳಿಯನೆಂದರಿತು ||
ಸ್ವಸ್ಥದಿಂ ಗಜವದನನೈದೆ ಪ |
ವಿತ್ರೆಯಂಬಿಕೆ ಗಣರು ಜಯವೆನ |
ಲಿತ್ತ ಬರಲನುಪಮೆಯ ಕಂಡನು ವಿದಲನಿದಿರಾಂತು || ೧ || 231 ||

ಶಂಕರಾಭರಣ - ಅಷ್ಟ
ಕಂಡನು ವಿದಲಾಸುರನುಮೆಯನ್ನು | ಕಂಡನು ||
ಕಂಡನು ವಿದಲ ತಾನುಮೆಯ ||
ಬ್ರಹ್ಮಾಂಡನಾಯಕಿಯನನುಪಮೆಯ | ಭ್ರಮೆ |
ಗೊಂಡು ತನ್ನೊಳೆ ತಾನು | ಕೊಂಡಾಡಿಕೊಂಡನು |
ಭಂಡ ಮದಾಂಧನು | ದ್ದಂಡ ಮಹಿಮಳನು || ಪ ||
ಸರುವ ಸಾಮಾನ್ಯಳಲ್ಲವಳು | ನೋಡೆ |
ನಿರುಪಮ ಕಾಂತಿಯುಳ್ಳವಳು | ಬಹು |
ತರದ ಪಾಂಡಿತ್ಯ ತೋರ್ಪವಳು | ನೋಟ |
ಕರ ಮನ ಸೆಳೆಯುವ | ಪರಮ ಸೌಂದರ್ಯವ |
ಧರಿಸಿದ ಶಿವೆಯಿವ | ಳಿರಲದೆ ವೈಭವ || ಕಂಡನು || ೧ ||

ಕಮಲದಳಾಯತ ನೇತ್ರೆ | ಎಂಥ |
ಕಮನೀಯ ಕನಕ ಸುಗಾತ್ರೆ | ಒಳ್ಳೆ |
ಕ್ರಮದ ವಿಶಾಲ ಚರಿತ್ರೆ | ವಿ |
ಕ್ರಮದೊಳೆಂದೆಂಬುದು | ಸಮನೆಂದು ಕಾಂಬುದು |
ಅಮಮಯೇನೆಂಬುದು | ಗಮನಿಸಲಿಂಬದು || ಕಂಡನು || ೨ ||

ಸೃಷ್ಟಿಯೊಳಿಂಥವಳಿಲ್ಲ | ಸರ್ವ |
ಶ್ರೇಷ್ಠಳೆಂದೆನಲು ಸುಳ್ಳಲ್ಲ | ಸುಪ್ರ |
ತಿಷ್ಠೆಯೊಳ್ಳೆಸುವಳೆಲ್ಲ | ಹಿಮ |
ಬೆಟ್ಟನಣುಗಿಯೆಂಬ | ಸ್ಪಷ್ಟತೆಗೆನೆಯಿಂಬ |
ಕೊಟ್ಟಚಲಳೆಯೆಂಬ | ಗುಟ್ಟರಿಯದೆ ಹುಂಬ || ಕಂಡನು || ೩ || 234 ||

ಭಾಮಿನಿ
ಅಂಬಿಕೆಯು ಇವಳೆನ್ನ ಗೃಹವನು |
ತುಂಬಲಾ ಸೌಭಾಗ್ಯಕೆಣೆಯೇ |
ಶುಂಭ ಮುಖ್ಯರ ಕೊಂದರೇನಾಯ್ತದಕೆ ನೋಯಿಸೆನು ||
ಸಂಭ್ರಮದಿ ಕರೆದೊಯ್ವೆನೊಲಿಸುತ |
ಲಂಬನೆತ್ತದೆನುತ್ತ ಖಳನಾ |
ಡಂಬರದಿ ನುಡಿಸಿದನು ದೇವಿ ಭವಾನಿಯನು ಮುದದಿ || ೧ || 235 ||

ಬೇಗಡೆ – ಝಂಪೆ (ತುಜಾವಂತು - ಝಂಪೆ)
ಪರಮ ಮಂಗಲೆ ನಿನ್ನ | ದರುಶನದೊಳಿಂದೆನ್ನ |
ಹರುಷವೇನೆಂಬೆ ಘನ | ಚರಿತಳೇ ಕೇಳು ||
ಧರಣಿ ಮೂರರೊಳುನ್ನ | ತರ ಗೆದ್ದ ಸಂಪನ್ನ |
ನಿರುವ ವಿದಲಾಖ್ಯ ನಾ | ಸುರರೆನಗೆ ಕೀಳು || ೧ ||

ಕೇಳಿ ಬಲ್ಲೆನು ವಿದಲ | ಖೂಳ ನೀನಿಂದು ದಳ |
ಜಾಲ ಸಹಿತೀ ಪ್ರಬಲ | ದಾಳಿಗೈದಿತ್ತ ||
ಕಾಳಗಕೆ ನಿತ್ತಗಲ | ಕೇಳಿಸುತಲೆ ಜಗಳ |
ತಾಳಿದೆಯ ರಣಸೋಲ | ಪೇಳದನು ಧೂರ್ತ || ೨ ||

ಬಂದುದಹುದಾನು ರಣ | ಕೆಂದು ಜಯದಾವರಣ |
ದಿಂದ ಸರಿದಿಲ್ಲ ಕ್ಷಣ | ಹೊಂದೆ ಭಯ ವೀರ ||
ಹಿಂದೆ ಶುಂಭಾದಿ ಘನ | ವಂದಿಗರ ಕೊಂದುದೆನ |
ಗೊಂದಿತ್ತು ಹಟ ಕಾಣ | ಲಂದಿನಾ ವೈರ || ೩ ||

ಸುರರ ಬಾಧಿಸಿದರೆನು | ತರಿದು ಶುಂಭಾದ್ಯರನು |
ತರಿದುದಹುದಂದಾನು | ಸರಿಯ ಬಿಡೆ ಖಳರ ||
ಹರಿ ಹರರ ಮತವನನು | ಸರಿಸಿಯಾಚರಿಸುವೆನು |
ಶರಣರನು ರಕ್ಷಿಪೆನು | ಇರಿಯುತಗ್ಗಳರ || ೪ ||

ಬಿಡೆನಂತೆ ನಾ ವೈರ | ಕಡು ಸಹಸಿ ರಣವೀರ |
ದೃಡವಾದರಾನೀಗ | ನುಡಿವುದದು ಬೇರೆ ||
ಪೊಡವಿ ಮೂರರೊಳು ವರ | ಬೆಡಗಿನೀ ನಿನಗೆ ವರ |
ಮೃಡನು ಸರಿ ಜೊತೆಯೆ ರಸ | ಮಿಡಿದು ಸುಖ ಬೇರೆ || ೫ ||

ನಾಲಿಗೆಯ ಬಿಗಿಹಿಡಿದು | ಹೇಳು ಇಂತೆನೆ ಹೊಡೆದು |
ಸೀಳಿಬಿಸುಡುವೆ ನಿಮಿಷ | ತಾಳಿ ನಿಲೆ ನಾನು ||
ಖೂಳತನದಿಂ ನುಡಿದು | ಬಾಳೆ ನೀ ಮುನ್ನಡೆದು |
ಕಾಳಗಕೆ ನಿಲು ನಿನ್ನ | ಕಾಲಗೀಯುವೆನು || ೬ || 241 ||

ಭೈರವಿ - ಅಷ್ಟ
ಸ್ಪಷ್ಟ ಹೇಳುವೆ ನಿನಗೆ | ನೀನೀಗೊಡ |
ಬಟ್ಟರೊಯ್ವೆನು ಮನೆಗೆ ||
ಪಟ್ಟದರಸಿತನ ಕೊಟ್ಟೆಲ್ಲ | ನೂತನಾ |
ಭೀಷ್ಟವ ಸಲಿಸುವೆನು || ೧ ||

ಮುಚ್ಚುಮುಚ್ಚಧಮ ಬಾಯ | ಆಗಲೆ ನಿನ |
ಗೆಚ್ಚರಿಸಿದೆನು ನ್ಯಾಯ ||
ಹುಚ್ಚಡರಿತೆ ತಲೆ | ಗುಚ್ಚರಿಸಲು ತಾಳೆ |
ಕೊಚ್ಚುವೆ ನಿಮಿಷದಲೆ || ೨ ||

ತಪ್ಪೆಂದುದೇನು ನಾನು | ಏನೆಂದೆಣೆ |
ಸಿಪ್ಪೆಯೀ ವಿದಲನನು ||
ಮುಪ್ಪುರಾರಿಗೆ ಬಿಡೆ | ದರ್ಪದೊಳೆಲ್ಲಡೆ |
ಯಪ್ಪಳಿಸಿದೆ ಮುಖ್ಯರ || ೩ ||

ಹರಗು ನಿನಗು ಸಮವೇ | ಭಾಸ್ಕರನಿದಿ |
ರಿರದೋಡುವುದು ತಮವೇ ||
ಹರಿಗಿದಿರೇ ಹುಲು | ನೊರಜು ಸುಮ್ಮನೆ ಹಲು |
ಕಿರಿಯದಿರೆಲೆ ಮೂರ್ಖನೆ || ೪ ||

ಇಂದ್ರಾದಿಗಳ ಸೋಲಿಸಿ | ಸ್ವರ್ಗವನಾಳು |
ತಂದದೊಳಿಹೆ ನೆಲಸಿ ||
ಸುಂದರೀಮಣಿ ನಿನ | ಗೆಂದುದಾನಿದಕೆನ್ನ |
ನಿಂದಿಸದೇಳು ಮುನ್ನ || ೫ ||

ಮತ್ತು ಮತ್ತೊದರದಿರು | ಪೇಳ್ವುದನೆ ನೀ |
ನಿತ್ತಿನಿತೆನ್ನಿದಿರು ||
ಇತ್ತರೆನಗೆ ದೂರು | ವೃತ್ತಾಂತಕಾದ್ಯರು |
ದೈತ್ಯನೆ ಸಹಸದೋರು || ೬ || 247 ||

ಭೈರವಿ - ಏಕ
ಆದರೆ ನಿಲ್ಲೆಂದೆನುತ | ಶರ |
ಕ್ರೋಧದಿ ಬಿಡೆ ಖಳನಾಥ ||
ಛೇದಿಸಿದಳು ಜಗದಂಬ | ಅವ |
ನೊಯ್ದೆಸೆದನು ಬದಲಂಬ || ೧ ||

ರುದ್ರಾಣಿಯು ಕಡಿದಿಡಲು | ಖಳ |
ನದ್ರಿಕಳಂಬವ ಬಿಡಲು ||
ರೌದ್ರದೊಳದ ವಜ್ರದಲಿ | ಶಿವೆ |
ಛಿದ್ರಿಸಿದಳು ನಿಮಿಷದಲಿ || ೨ ||

ಭಲೆ ಭಲೆಯೆಂದಾ ಖಳನು | ಬಿಡೆ |
ಬಲುಮಯೊಳುರು ಶರಗಳನು||
ಘಳಿಲನೆ ಕಡಿದಿಕ್ಕಿದಳು | ಜಯ |
ಗಳಿಸಿಯಗಜೆ ಮಿಕ್ಕಿದಳು || ೩ || 250 ||

ಭಾಮಿನಿ
ದುಷ್ಟ ಖಳ ನೋಡೆನ್ನ ಶಕ್ತಿಯ |
ನೆಷ್ಟದೆಂದೆನುತಾಗಲಂಬಿಕೆ |
ಥಟ್ಟನೆಸೆಯಲೊಂದು ಶರಮನಾಕ್ಷಣದೊಳಸುರ ||
ಸೃಷ್ಟಿಗೊರಗಲು ಮೂರ್ಛೆಯಿಂ ಕಂ |
ಡಷ್ಟರೊಳಗುತ್ಪಲನು ಕ್ರೋಧದೊ |
ಳಟ್ಟಹಾಸವ ಗೈಯುತಗಜೆಯನಿದಿರಿಸುತ್ತೆಂದ || ೧ || 251 ||

ಶಂಕರಾಭರಣ - ಅಷ್ಟ
ಭಳಿರೆ ನಾರಿ ಬಲುಮೆಯೇರಿ |
ನಲಿವೆ ಭಾರಿ ನಿಲು ವೈಯಾರಿ |
ಗೆಲುವೆನುತ್ಪಲಾಂಕ ವೈರಿ | ಕುಲಕೆ ನಾ ಹರಿ || ೧ ||

ಉತ್ಪಲಾಂಕನಾದರೇನು |
ಬಲ್ಪ ನಿಲಿಸಿ ಕೊಲುವರಾನು |
ಕಲ್ಪಿಸಿರಲು ಬದುಕೆ ನೀನು | ಅಲ್ಪ ಸಹಸನು || ೨ ||

ಅಂಬೆ ನೀನು ತಿಳಿಯದೇತ |
ಕೆಂಬೆ ತ್ರಿಜಗ ಜೈಸಿದಾತ |
ನಂಬುವಿದ್ಯೆಗಾನೆ ದಾತ | ತುಂಬ ಬಲಯುತ || ೩ ||

ಶುಂಭ ಮುಖ್ಯ ಖಳರ ಕೊಂದ |
ಅಂಬಿಕೆಯ ಪ್ರತಾಪ ಕುಂದ |
ದೆಂಬುದರಿಯೊ ದನುಜ ಕಂದ | ಹುಂಬ ಬಿಡು ಮದ || ೪ ||

ಜಡಜಭವನ ಭಜಿಸಿ ವರವ |
ಪಡೆದೆ ನಾನು ಗೆಲಲು ಸರುವ |
ಪೊಡವಿಯಲ್ಲಿ ಎನ್ನ ತರಿವ | ದಡಿಗನಾರವ || ೫ ||

ಪುರುಷರಿಂದ ಮಾತ್ರ ನಿನಗೆ |
ಮರಣಬಾರದರಿವೆ ನನಗೆ |
ತರಿವ ಶಕ್ತಿಯಿಹುದು ಕಣೆಗೆ | ಹಿರಿಮೆ ಬಹು ಬಗೆ || ೬ ||

ಮತ್ತೆ ದೈತ್ಯ ತೆಗೆದು ಬಾಣ |
ವೆತ್ತಿ ಸುರಿಸಲೆಲ್ಲ ತ್ರಾಣ |
ವೆತ್ತು ತರಿದಳದನು ಭವನ | ಪತ್ನಿಯಾಕ್ಷಣ || ೭ || 258 ||

ವಾರ್ಧಕ
ಮುನಿವರರು ಲಾಲಿಸಿರಿ ದನುಜನೊಡನೀ ತೆರದಿ |
ಸೆಣೆಸುತಿರಲಂಬೆ ಗರ್ಜನೆಯಿಂದ ವಿದಲನೆ |
ದ್ವನುವಾಗೆ ರಣಕೆ ಕಂಡನುಪಮೆಯುಮಾದೇವಿಯೆಣಿಸುತಸುರರೊಳು ಕಾದೆ ||
ಮುನಿದು ಬರಿಸಲ್ಕೆ ಶಾಕಿನಿ ಡಾಕಿನೀ ಬಳಗ |
ವನು ಭೀಷಣೆಯರು ಬಂದನುಮತಿಯ ಪಡೆದೊಡನೆ |
ಮಣಿದೇಳುತಾರ್ಭಟಿಸಿ ಕಿನಿಸಿನಿಂ ದೈತ್ಯರಂ ಕೆಣಕಿ ಮುಸುಕುತ್ತೆಂದರು || ೧ || 259 ||

ಭೈರವಿ - ಏಕ
ಮಾತೆಯ ಕೆಣಕಿದಿರೇಕೆ | ಖಳ |
ಪಾತಕಿಗಳೆ ನಿಲಿ ಧುರಕೆ ||
ಈ ತೆರ ಬಿಡೆವಾವಿರುತ | ಕುಡಿ |
ವಾತುರ ನಿಮ್ಮಯ ರಕುತ || ೧ ||

ಆತುರ ಧುರವಂತಿರಲಿ | ಹುಲು |
ಭೂತಗಳಿಲ್ಲಿಂ ತೆರಳಿ ||
ಭೀತಿ ಪಡೆವು ನೀವ್ಕೆಣಕೆ | ಶರ |
ವ್ರಾತದಿ ಗೆಲುವೆವು ಕ್ಷಣಕೆ || ೨ ||

ಶಾಕಿನಿ ಡಾಕಿನಿ ಬಳಗ | ಈ |
ರೀಕಿನ ಮಾತಿಗೆ ತೊಲಗ ||
ಯಾಕೆ ನಲಿವಿರಬ್ಬರದಿ | ಕೊಂ |
ದೀ ಕಡೆಗೆಳೆವೆವು ಭರದಿ || ೩ ||

ಬರಿದೇ ಬಗುಳುವಿರೇಕೆ | ವಿಧಿ |
ವರಬಲವಿರ್ಪುದು ಧುರಕೆ ||
ಹರಿಹರಬ್ರಹ್ಮರೆ ಬರರು | ಎನೆ |
ಧರಣಿಯೊಳೆಮಗಿದಿರಾರು || ೪ ||

ಬ್ರಹ್ಮನ ವರವಿಹಿದೆನುತ | ಒಣ |
ಹಮ್ಮೇರಿದುದಿರಲನಿತ ||
ಎಮ್ಮೊಳು ಮೆರೆಸಲು ಜೈಸ | ಅದು |
ಹೆಮ್ಮಕ್ಕಳಿಗನ್ವಯಿಸ || ೫ ||

ಕೊಲ್ಲಲು ನಿಮ್ಮನಸಾಧ್ಯ | ಎಂ |
ದಲ್ಲದೆ ಮತ್ತೇನ್ನದ್ಯ ||
ಗೆಲ್ಲುತಲಟ್ಟಲು ತ್ರಾಣ | ನ |
ಮ್ಮಲ್ಲಿದೆ ಬಿಡುವೆವು ಬಾಣ || ೬ ||

ಪರಿಕಿಸಿ ಬಾಣವ ಬಿಟ್ಟು | ಫಲ |
ವಿರದೀತೆರ ಬೊಬ್ಬಿಟ್ಟು ||
ಶರಬರಲೆಮಗದು ತೃಣವು | ಮೆಲ |
ಲಿರುವುದು ನಿಮ್ಮೌತಣವು || ೭ ||

ಕೇಳುತದನು ಕ್ರೋಧದಲಿ | ಆ |
ಖೂಳರು ಶರವೆತ್ತುತಲಿ ||
ತಾಳಿರೆನುತ ಬಿಡಲವರು | ಬಹ |
ಕೋಲುಗಳಂ ಸವರಿದರು || ೮ || 267 ||

ಭಾಮಿನಿ
ಭಂಡ ದೈತ್ಯರು ಬಳಿಕಲಾಶುಗ |
ತಂಡದಿಂ ಮುಸುಕಲ್ಕೆ ಸಹಿಸದ |
ಭಂಡ ಶಕ್ತಿಗೆ ಬಳಲಿ ಶಾಕಿನಿ ಮುಖ್ಯರಡಗಲದ ||
ಕಂಡಗಜೆ ಖತಿಗೊಂಡು ಕ್ಷಣದಿ ಪ್ರ |
ಚಂಡ ಚಂಡಿಕೆ ರೂಪದಿಂ ಬ್ರ |
ಹ್ಮಾಂಡ ನಡುಗಲ್ವಂಡಿಸುವೆನೆಂದೊರೆದಳಸುರರಿಗೆ || ೧ || 268 ||

ಸೌರಾಷ್ಟ್ರ - ತ್ರಿವುಡೆ
ಭಂಡ ದೈತ್ಯಾಧಮರೆ ಬಹಳ ಪ್ರ |
ಚಂಡರಾದಿರೆ ನೋಡಿರೆನ್ನಯ |
ಖಂಡ ಶಕ್ತಿಯ ತಿಳಿಯಿರೇ ಈ | ಚಂಡಿಕೆಯನು || ೧ ||

ಚಂಡಿಕೆಯು ನೀನಾದರೇನು |
ದ್ವಂಡ ಸಹಸಿಗಳಿರ್ಪೆವೆಮ್ಮನು |
ದಂಡಿಸಲ್ಕಳವಲ್ಲ ಗೆದ್ದೆವ | ಜಾಂಡವೆಲ್ಲ || ೨ ||

ಬ್ರಹ್ಮ ನಿರ್ಮಿತ ಜಗವ ದಂಡಿಸಿ |
ಧರ್ಮಬಾಹಿರರಾದ ನೀವು ಕು |
ಕರ್ಮಿಗಳು ನಿಮಗಂತ್ಯವಿದು ವಿಧಿ | ಸಮ್ಮತದಲೆ || ೩ ||

ದಂಡನಾರ್ಹರ ಬಿಡೆನೆನುತಲಾ |
ಚಂಡಿಕೆಯು ಚೆಂಡಿನಲಿ ಬಡಿದು ಪ್ರ |
ಚಂಡ ದೈತ್ಯರ ಕಡೆಹಿದಳು ಭೂ | ಮಂಡಲಕ್ಕೆ || ೪ ||

ಖಂಡಿಸುತ ಮತ್ತವರ ರುಂಡವ |
ಚೆಂಡಿನಂತಾಡುತಿರೆ ದಿವಿಜರ |
ಖಂಡಶಕ್ತಿಯ ಪ್ರಾರ್ಥಿಸಿದರು | ದ್ವಂಡ ಮಣಿದು || ೫ || 273 ||

ವಾರ್ಧಕ
ಜಯತು ಮಹಮಾಯೆ ಜಯ ಜಯತು ಶಿವಜಾಯೆ ಜಯ |
ಜಯ ಜಯತು ಶುಭಕಾಯೆ ಜಯ ಜಯತು ಕಮನೀಯೆ |
ಜಯತು ದಿಗ್ವಿಜಯೆ ಜಯ ಜಯತು ಗಿರಿನಿಲಯೆ ಜಯ ಜಯತು ಜಯ ಜಯತು ಜಯತು ||
ಜಯತು ಮಣಿಭೂಷೆ ಜಯ ಜಯತು ರವಿಜಾತೆ ಜಯ |
ಜಯತು ಭುವನೇಶೆ ಜಯ ಜಯತು ಭವನಾಶೆ ಜಯ |
ಜಯತು ನಿರ್ದೋಷೆ ಜಯ ಜಯತು ಖಳದೂಷೆ ಜಯ ಜಯ ತಾಯೆ ಜಯತು ಜಯತು || ೧ || 274 ||

ಮಧ್ಯಮಾವತಿ - ತ್ರಿವುಡೆ
ಇಂತು ಪ್ರಾರ್ಥಿಸಲಮರರಂಬಿಕೆ |
ಸಂತಸದಿ ಸೌಮ್ಯಾಕೃತಿಯ ತಳೆ |
ದಾಂತ ಚೆಂಡಿಂ ಖಳರ ಕೊಂದೆ ಮ |
ಹಾಂತಮಹಿಮೆಯದುರುಳಿಪೆ | ನಿಂತಿದತ್ತ || ೧ ||

ಕಾಶಿಯೊಳು ವರ ಕುಂದಕೇಶ್ವರ |
ವಾಸಲಿಂಗವೆನುತ್ತ ಮೆರೆದು ವಿ |
ಶೇಷ ಶಕ್ತಿಯ ಫಲವ ಕೊಡಲೆಂ |
ದಾಶಿಸುವೆನೆನುತೊರೆಯುತ | ಲೇಸನೆಣಿಸಿ || ೨ ||

ಹರಸುತಮರರ ಕಳುಹಿ ಸ್ವರ್ಗಕೆ |
ಗಿರಿಜೆ ಗಣರೊಡನೈದಿ ಪರಮೇ |
ಶ್ವರನ ಬಳಿಕೆಲ್ಲವನು ಪೇಳುತ |
ಪೊರೆಯುತಿರ್ದಳು ಶರಣರ | ಕರುಣದಿಂದ || ೩ ||

ಸೂತ ಶೌನಕ ಮುನಿಗಣಂಗಳಿ |
ಗೀ ತೆರದಿ ಬಣ್ಣಿಸಿದ ಚರಿತೆಯ |
ಖ್ಯಾತ ಕೀರಿಕ್ಕಾಡು ಬೋಧಕ |
ಭೂತಳಾಮರ ವಿಷ್ಣುವು | ಸಾತಿಶಯದಿ || ೪ ||

ವಿರಚಿಸಿದನೀ ಯಕ್ಷಗಾನದಿ |
ಪರಮ ಮುನಿಪುರದೊಡೆಯ ಕೃಷ್ಣನ |
ಕರುಣದಿಂದಲಿ ಕನ್ನಡಾಂಬೆಯ |
ಚರಣ ಸೇವೆಯೆನುತ್ತಲಿ | ಮೆರೆಸಿರೆಲ್ಲ || ೫ || 279 ||

ಮಂಗಲ ಪದ
ರೇಗುಪ್ತಿ - ಅಷ್ಟ
ಮಂಗಲಂ | ಜಯ | ಮಂಗಲಂ |
ಮಂಗಲ ಶ್ರೀ ಗೋಪಾಲನಿಗೆ |
ಮಂಗಲ ತುಳಸೀಮಾಲನಿಗೆ |
ಮಂಗಲಂ ಜಯ ಮಂಗಲಂ || ಪ ||
ಗಿರಿಜಾರಮಣನ ಮಿತ್ರನಿಗೆ |
ಗರುಡಗಮನ ಸುಪವಿತ್ರನಿಗೆ |
ಸರಸಿಜನೇತ್ರಗೆ | ಸುರಕುಲ ಸ್ತೋತ್ರಗೆ |
ಸುರುಚಿರ ಸುಂದರ ಗಾತ್ರನಿಗೆ |
ಮಂಗಲಂ | ಜಯ | ಮಂಗಲಂ || ೧ ||

ಹತ್ತವತಾರವನೆತ್ತಿದಗೆ |
ಮತ್ತ ಬಲೀಂದ್ರನನೊತ್ತಿದಗೆ |
ಭಕ್ತ ಜನರ ಮನ | ದರ್ಶಿಯನನುದಿನ |
ಇತ್ತು ಪೊರೆವ ಗೋವರ್ಧನಗೆ ||
ಮಂಗಲಂ | ಜಯ | ಮಂಗಲಂ || ೨ ||

ಸನಕ ಸನಂದನ ಪೂಜಿತಗೆ |
ದಿನಮಣಿ ಕೋಟಿ ವಿರಾಜಿತಗೆ |
ಮನುಮಥ ಪಿತನಿಗೆ | ಘನ ಸುಚರಿತನಿಗೆ |
ಮುನಿಪುರ ಸ್ಥಿರ ಶ್ರೀ ಕೃಷ್ಣನಿಗೆ ||
ಮಂಗಲ ಶ್ರೀ ಗೋಪಾಲನಿಗೆ |
ಮಂಗಲ ತುಳಸೀ ಮಾಲನಿಗೆ |
ಮಂಗಲಂ | ಜಯ | ಮಂಗಲಂ || ೩ || 282 ||

*****ಶುಭಂ*****

ಕೃತಜ್ಞತೆಗಳು

ಅಂತರಜಾಲ ಪ್ರಕಾಶನ ಪ್ರಾಯೋಜಕರು: ನಿರೀಕ್ಷಿಸಲಾಗಿದೆ

ಮೂಲ ಪ್ರಕಾಶಕರು: ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ - ೧೯೮೭

ಪ್ರಸಂಗ ಪ್ರತಿ ಆಧಾರ: ಶ್ರೀ ಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ – ೧೯೮೭ ರಲ್ಲಿ ಪ್ರಕಟಿತ ಪ್ರತಿ

ಪ್ರಸಂಗ ಪ್ರತಿ ಕೊಟ್ಟವರು: ಡಾ. ಪಟ್ಟಾಜೆ ಗಣೇಶ ಭಟ್

ಪ್ರಸಂಗ ಪ್ರತಿ ಒದಗಣೆಗೆ ಸಹಕಾರ: ಪಟ್ಟಾಜೆ ವಸಂತ ಕೃಷ್ಣ, ಅಶ್ವಿನಿ ಹೊದಲ

ಅಂತರಜಾಲ ಪ್ರತಿ ಬರವಣಿಗೆ: ಶೈಲಜಾ ಎಸ್. ಎಲ್.

ಅಂತರಜಾಲ ಪ್ರತಿ ವಿನ್ಯಾಸ: ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

ಅಂತರಜಾಲ ಪ್ರತಿ ತಿದ್ದುಪಡಿ: ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ: ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ